ನಾಡೋಜ ಎಚ್.ಎಲ್. ನಾಗೇಗೌಡ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು

ಡಾ. ಚಕ್ಕೆರೆ ಶಿವಶಂಕರ್

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧೩

ನಾಡೋಜ ಎಚ್.ಎಲ್. ನಾಗೇಗೌಡ

ವ್ಯಕ್ತಿ ಪರಿಚಯ

ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಬಡಾವಣೆ
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

NADOJA H.L. NAGEGOWDA-
A pen portrait - by DR. CHAKKERE SHIVASHANKAR.
Published by : KARNATAKA JANAPADA PARISHATHU.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalooru - 560 054.
Pages : 32. Price : Rs.10. 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು : ಕೃತಿಕ ಪ್ರಿಂಟ್–ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಚಕ್ಕೆರೆ ಶಿವಶಂಕರ್ ಅವರು ನಾಡೋಜ ಎಚ್.ಎಲ್. ನಾಗೇಗೌಡ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೨೦-೦೨-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ನಾಡೋಜ ಎಚ್.ಎಲ್. ನಾಗೇಗೌಡ

ಮೇಲುನೋಟಕ್ಕೆ ಸಿಪ್ಪೆ ತೆಗೆಯದ ಬಲಿತ ತೆಂಗಿನಕಾಯಿಯಂತೆ ಗಡುಸಾಗಿ ಕಾಣುವ, ಮಾತಿಗೆ ಕುಳಿತಾಗ ಯಾವುದೇ ಹಿಡಿತ, ಬಿಗು, ದರ್ಪ, ಅಹಂಗಳಿಲ್ಲದೆ ಸರಸ ಸ್ನೇಹದ ವಾತಾವರಣವನ್ನು ಸೃಷ್ಟಿಸುತ್ತಿದ್ದ ಎಚ್.ಎಲ್. ನಾಗೇಗೌಡರು ಆಧುನಿಕ ಕನ್ನಡ ಸಾಹಿತ್ಯ, ಅನುವಾದ ಸಾಹಿತ್ಯ ಮತ್ತು ಕನ್ನಡ ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಬೆರಳೆಣಿಕೆ ಸಾಹಿತಿಗಳಲ್ಲಿ ಒಬ್ಬರು. ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಅಚ್ಚಳಿಯದ ಸೇವೆ ಸಲ್ಲಿಸಿರುವ ಗೌಡರದು ಬಹುಮುಖ ಪ್ರತಿಭೆ. ಅಧಿಕಾರಿಯಾಗಿ, ಕವಿಯಾಗಿ, ಕಥೆಗಾರರಾಗಿ, ಅನುವಾದಕರಾಗಿ, ಕಾದಂಬರಿಕಾರರಾಗಿ, ಜಾನಪದ ಸಂಗ್ರಾಹಕರಾಗಿ ಸಂಶೋಧಕರಾಗಿ ಸಾಂಸ್ಥಿಕ ನಿರ್ಮಾತೃವಾಗಿ ಎಚ್.ಎಲ್. ನಾಗೇಗೌಡರು ನಾಡಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ.

ಒಂದು ಕಾಲಕ್ಕೆ ತೆಂಗಿನಕಾಯಿ ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಿದ್ದ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿ ನಾಗೇಗೌಡರ ಹುಟ್ಟೂರು. ತಂದೆ ಲಿಂಗೇಗೌಡರು, ತಾಯಿ ಹುಚ್ಚಮ್ಮನವರು. ಬಸ್ಸು, ಬೈಸಿಕಲ್ಲುಗಳನ್ನೇ ಕಂಡರಿಯದ ಊರಾಗಿತ್ತು. ಇಂತಹ ಸಣ್ಣ ಹಳ್ಳಿಯಲ್ಲಿ 1915ರ ಫೆಬ್ರವರಿ 11 ರಂದು 'ದೊಡ್ಡಮನೆ' ಕುಟುಂಬದಲ್ಲಿ ಜನಿಸಿದ ನಾಗೇಗೌಡರ ದೊಡ್ಡಮನೆ ಅಕ್ಷರಶಃ ಸಂಖ್ಯಾಬಲದಿಂದಲೂ ದೊಡ್ಡದಾಗಿಯೇ ಇತ್ತು. ಮೂರು ಜನ ಅಣ್ಣತಮ್ಮಂದಿರು, ಅವರ ಹೆಂಡತಿ ಮಕ್ಕಳು, ನಾಲ್ಕೈದು ಜನ ಅಕ್ಕತಂಗಿಯರು, ಅವರ ಮಕ್ಕಳುಗಳು, ಮೂರ್ನಾಲ್ಕು ಜನ ಹೆಣ್ಣು ಮಕ್ಕಳು, ಆಳುಕಾಳು, ದನಕರ ಕುರಿ ಕೋಳಿ ಹೀಗೆ.

ನಾಗೇಗೌಡರು ಹುಟ್ಟಿದ್ದು ತಾಯಿಯ ತವರುಮನೆ 'ಬಂಗಲಿ' ಯಲ್ಲಿ. ಹುಟ್ಟಿದ ಮೂರೇ ವರ್ಷಕ್ಕೆ ಹೆತ್ತತಾಯಿ ಇನ್‌ಫ್ಲೂಯೆಂಜಾ ಬಂದು ಸಾವನ್ನಪ್ಪಿದರು. ಅಜ್ಜಿಯ ಅಂದರೆ ತಂದೆಯ ತಾಯಿಯ ಆರೈಕೆಯಲ್ಲಿ ಬೆಳೆದ ಗೌಡರಿಗೆ ತಾಯಿಯ ಮುಖ ಕಂಡ ನೆನಪಿಲ್ಲ. ಬಾಲ್ಯದಲ್ಲೇ ಸಿಡುಬು ರೋಗಕ್ಕೆ ತುತ್ತಾಗಿ ಬದುಕಿ ಉಳಿದದ್ದೊಂದು ಪವಾಡವೇ ಸರಿ.

ದೊಡ್ಡಮನೆಯ ವಿಶಾಲವಾದ ಜಗಲಿಯೇ ಇವರ ಕೂಲಿಮಠ. ತಿಂಗಳಿಗೆ 2–3 ರೂಪಾಯಿ ಸಂಬಳ ಪಡೆಯುತ್ತಿದ್ದ ಓಚಯ್ಯನವರೇ ಗೌಡರ ಗುರು. ಜಗುಲಿಯ ಮೂಲೆಯಲ್ಲಿ ಹರಡಿದ ಸಣ್ಣಮರಳೇ ಸ್ಲೇಟು, ಬೆರಳೇ ಬಳಪ. ಮರಳಿನ ಮೇಲೆ ಬೆರಳಿನಿಂದ ತಿದ್ದುವಾಗ ಗಾಯವಾದೀತೆಂದು, ಊರಿನ ತೋಟದ ಬೇಲಿಗಳಲ್ಲಿ ಬೆಳೆಯುತ್ತಿದ್ದ ಗಜ್ಜುಗ ತಂದು ಅರ್ಧಕ್ಕೆ ಕೊಯ್ದು ತಿದ್ದುವ ಬೆರಳಿಗೆ ಧರಿಸಿಕೊಂಡು ಅಕ್ಷರ ತಿದ್ದುತ್ತಿದ್ದರು. ತಂದೆಗೆ ಮಗನನ್ನು ಏನಾದರೂ ಮಾಡಿ ಅಮಲ್ದಾರ್ ಮಾಡಿಸಬೇಕೆಂಬ ಆಸೆ. ಕೂಲಿಮಠ ಮುಗಿದ ಮೇಲೆ ಪ್ರಾಥಮಿಕ ಶಾಲೆಗೆ ಪಕ್ಕದ ಹಳ್ಳಿ ಅಳೀಸಂದ್ರಕ್ಕೆ ಪ್ರಯಾಣ. ಅಕ್ಷರ ಕಲಿಯಲು ಮತ್ತು ತಿದ್ದಲು ಮರಳು–ಬೆರಳಿನಿಂದ, ಸ್ಲೇಟು–ಬಳಪಕ್ಕೆ ಬಡ್ತಿ. ಸಂಜೆ ಮನೆಗೆ ವಾಪಸಾದ ಕೂಡಲೇ ಮನೆಪಾಠ, ಓದುವುದು, ಹೇಳಿ ಬರೆಯಿಸುವುದು. ಪ್ರಾಥಮಿಕ ಶಾಲೆ ಪೂರೈಸಿ ಲೋಯರ್ ಸೆಕೆಂಡರಿಗೆ ದಾಖಲಾಗಲು ನಾಗತಿಹಳ್ಳಿಗೆ ಪ್ರಯಾಣ. ಈ ಹಳ್ಳಿಯಲ್ಲಿದ್ದುದು ಕನ್ನಡ ಲೋಯರ್ ಸೆಕೆಂಡರಿ. ಸರಿಯಾಗಿ ಪಾಠ ಒಪ್ಪಿಸದಿದ್ದರೆ ಬೆತ್ತ, ರೂಲುದೊಣ್ಣೆ ಬಡಿತ. ಪಾಠ ಹೇಳುವ ಶಾಲೆ ಒಂದೆಡೆಯಾದರೆ, ಪರೀಕ್ಷೆ ಕಟ್ಟುವುದು ಮತ್ತೊಂದೆಡೆ. ಮೂವತ್ತು ಮೈಲಿ ದೂರದ ಕುಣಿಗಲ್‌ನಲ್ಲಿ ಪರೀಕ್ಷೆ ಕಟ್ಟಿ ಕನ್ನಡ ಲೋಯರ್ ಸೆಕೆಂಡರಿ ಪಾಸ್

ಮಾಡಿದ ನಾಗೇಗೌಡರು ಆ ಕಾಲದಲ್ಲಿ ಹೆರಗನಹಳ್ಳಿ ಸುತ್ತ ಸುದ್ದಿ ಮಾಡಿದ್ದರಂತೆ.

ಕನ್ನಡ ಲೋಯರ್ ಪರೀಕ್ಷೆ ಪಾಸಾದ ನಂತರ ಇಂಗ್ಲಿಷ್ ಲೋಯರ್ ಸೆಕೆಂಡರಿ ಪಾಸುಮಾಡಲು ದೂರದ ಚನ್ನರಾಯಪಟ್ಟಣಕ್ಕೆ ಪ್ರಯಾಣ. 1930 ರಲ್ಲಿ ಅದನ್ನು ಪಾಸ್‌ಮಾಡಿ ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಚನ್ನಪಟ್ಟಣಕ್ಕೆ ಆಗಮನ. ಆಗ ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಬಿರುಸಿನ ವಾತಾವರಣ. ದೇಶಭಕ್ತಿಯ ಕಾವು. ಚನ್ನಪಟ್ಟಣದಲ್ಲೇ ಜರುಗಿದ ಪ್ರಜಾಪಕ್ಷ ಸಮ್ಮೇಳನದಲ್ಲಿ ತಾವೂ ಸ್ವಯಂ ಸೇವಕರಾಗಿ ದುಡಿದು ವಿದೇಶಿ ವಸ್ತುಗಳನ್ನು ಸುಟ್ಟರು. ಖಾದಿಬಟ್ಟೆಯನ್ನು ಧರಿಸಿದರು. ಊರಿಗೆ ಹಿಂತಿರುಗಿದಾಗ ಅಟ್ಟದ ಮೇಲಿದ್ದ ಹಳೆಯ ಚರಕ ಹೊರತೆಗೆದು ರಿಪೇರಿಮಾಡಿ ನೂಲು ನೂತು ಬಟ್ಟೆ ನೇಯಿಸಿ ಧರಿಸಿದರು. ಊರಿನ ಹರಿಜನರಿಗೆ ಹೆಂಡ ಕುಡಿಯಬೇಡಿರೆಂದು ಬೋಧಿಸಿದರು.

1933ರಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಇಂಟರ್ ಮೀಡಿಯಟ್ ಕಾಲೇಜಿಗೆ ಸೇರಲು ಪ್ರಥಮ ಬಾರಿಗೆ ಬೆಂಗಳೂರಿಗೆ ಬಂದರು. ವಿಶ್ವೇಶ್ವರಪುರದಲ್ಲಿದ್ದ ಒಕ್ಕಲಿಗರ ಹಾಸ್ಟಲ್‌ನಲ್ಲಿ ಉಳಿದುಕೊಂಡು ಕಾಲೇಜು ವಿದ್ಯಾಭ್ಯಾಸ ಪ್ರಾರಂಭಿಸಿದರು. ಹಾಸ್ಟಲಿಗೆ ಹತ್ತಿರದಲ್ಲಿದ್ದ ಶ್ರೀ ರಾಮಕೃಷ್ಣಾಶ್ರಮಕ್ಕೆ ತಪ್ಪದೆ ಭೇಟಿ ಕೊಡುತ್ತಿದ್ದರು. ಸರೋಜಿನಿ ನಾಯ್ಡು, ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳಂತಹ ಪ್ರಸಿದ್ಧ ವಾಗ್ಮಿಗಳ ಭಾಷಣ ಕೇಳುವ ಅವಕಾಶ, ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಮಹಾತ್ಮ ಗಾಂಧೀಜಿಯವರನ್ನು ನೋಡುವ, ಅವರ ಭಾಷಣ ಕೇಳುವ ಪುಣ್ಯ ಲಭಿಸಿತು.

ಕಾಲೇಜಿನಲ್ಲಿ ಬಿ.ಎಂ.ಶ್ರೀ. ಇಂಗ್ಲೀಷ್ ಕಲಿಸಿದರೆ, ವಿ.ಸೀ. ಕನ್ನಡ

ಕಲಿಸುತ್ತಿದ್ದರು. ಹಿಂದಿ ಕಲಿಕೆ ಚಳುವಳಿ ಬಲವಾಗಿದ್ದುದರಿಂದ ಸಿ. ರಂಗಾಚಾರ್ ಎಂಬ ಸಂಸ್ಕೃತ ಮೇಷ್ಟ್ರು ಕಾಲೇಜಿನಿಂದ ಹೊರಗೆ ಕಲಿಸುತ್ತಿದ್ದ ಹಿಂದಿಯನ್ನು ಅಭ್ಯಾಸ ಮಾಡಿ 'ಪ್ರಥಮ' ಮತ್ತು 'ಪ್ರವೇಶ' ಪರೀಕ್ಷೆಗಳನ್ನು ಒಂದೇ ವರ್ಷದಲ್ಲಿ ಪಾಸುಮಾಡಿದರು.

ಇಂಟರ್ ಮೀಡಿಯಟ್ ಪಾಸಾದ ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎಸ್‌ಸಿ. ಪದವಿಗೆ ಸೇರಿದರು. ತಂದೆ ಲಿಂಗೇಗೌಡರಿಗೆ ಮಗ ಲಾ ಓದಬೇಕೆಂಬ ಆಸೆ. ಕಾರಣ ಆವತ್ತಿನ ದಿನಗಳಲ್ಲಿ ಲಾಯರುಗಳಿಗೆ ಸಿಗುತ್ತಿದ್ದ ಗೌರವ, ಫೀಜು, ಸುಖ ಮತ್ತಾರಿಗೂ ಇರಲಿಲ್ಲ. ಅಲ್ಲದೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದ ಪ್ರಮುಖರೆಲ್ಲಾ ಲಾಯರುಗಳೇ ಆಗಿದ್ದುದೂ ಸಹ ಮತ್ತೊಂದು ಕಾರಣವಾಗಿತ್ತು. ತಂದೆಯ ಬಯಕೆಯನ್ನು ಅಲ್ಲಗಳೆಯದ ಮಗ ಬೆಂಗಳೂರಿನಲ್ಲಿ ಕಾಲೇಜಿಗೆ ಸೇರಿದರು. ವಿ.ಎಲ್.ಡಿಸೌಜಾ, ಎ.ಆರ್.ವಾಡಿಯಾ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ತೀ.ನಂ.ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್ ಮುಂತಾದ ಅತಿರಥ ಮಹಾರಥರ ಗರಡಿಯಲ್ಲಿ ಪಳಗಿದರು.

ನಾಗೇಗೌಡರು ಬುದ್ಧಿವಂತ, ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಮಾಧ್ಯಮಿಕ ಶಾಲೆಗೆ ಸೇರಿದಂದಿನಿಂದಲೂ ಅವರಿಗೆ ಸ್ಕಾಲರ್‌ಷಿಪ್ ಇಲ್ಲವೆ ಫ್ರೀಷಿಪ್ ಬರುತ್ತಿತ್ತು. ದೊಡ್ಡಮನೆಯ ದೊಡ್ಡ ಸಂಸಾರವನ್ನು ನಿಭಾಯಿಸಲು ಸಾಧ್ಯವಾಗದೆ ಹೆಣಗಾಡುತ್ತಿದ್ದ ತಂದೆ ಲಿಂಗೇಗೌಡರಿಗೆ ತನ್ನ ವಿದ್ಯಾಭ್ಯಾಸದ ಖರ್ಚು ಹೊರೆಯಾಗದಂತೆ ನೋಡಿಕೊಂಡು ಪದವಿಯನ್ನು ಗಳಿಸಿದರು. 1937ರಲ್ಲಿ ಬಿ.ಎಸ್‌ಸಿ. ಪದವಿ ಪಡೆದ ಗೌಡರು ಇಡೀ ನಾಗಮಂಗಲ ತಾಲ್ಲೂಕಿಗೆ ಒಕ್ಕಲಿಗರಲ್ಲಿ ದ್ವಿತೀಯ ಗ್ರಾಜುಯೇಟ್ ಎಂದು ಹೆಸರಾದರು. ಈ ಸುದ್ದಿ ನಾಡಿನ ತುಂಬಾ

ಹರಡಿತು. ಬಿ.ಎಸ್‌ಸಿ. ಪದವಿ ಪಡೆದ ನಂತರ ಎಲ್‌ಎಲ್.ಬಿ. ಅಧ್ಯಯನಕ್ಕಾಗಿ, ಮೈಸೂರು ಸಂಸ್ಥಾನದಲ್ಲಿ ಆಗ ಎಲ್ಲಿಯೂ ಲಾ ಕಾಲೇಜು ಇರದಿದ್ದ ಪ್ರಯುಕ್ತ ಪೂನಾಕ್ಕೆ ಪ್ರಯಾಣ ಮಾಡಿದರು. ಪೂನಾ ಲಾ ಕಾಲೇಜಿನಲ್ಲಿ ಆವತ್ತಿನ ಹಿಂದೂ ಲಾ ಪ್ರಾಧ್ಯಾಪಕರು, ಮುಂದೆ ಹೆಸರಾಂತ ಕ್ರಿಮಿನಲ್ ಲಾಯರೆನಿಸಿಕೊಂಡ ಬೆಂಗಳೂರಿನ ದೇವದಾಸ್ ಅವರು ನಾಗೇಗೌಡರ ಸಹಪಾಠಿ. ಪುಣೆಯಲ್ಲಿಯೂ ಗೌಡರ ದೇಶಭಕ್ತಿ ಕಡಿಮೆಯಾಗಿರಲಿಲ್ಲ. ಲಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಊರಿಗೆ ಮರಳಿದರು.

ಎರಡು ಪದವಿಗಳನ್ನು ಪಡೆದಿದ್ದರೂ ಉದ್ಯೋಗವಿಲ್ಲದೆ ಮುಂದೇನು ಮಾಡಬೇಕೆಂಬ ಭವಿಷ್ಯದ ಚಿಂತೆ ಕಾಡುತ್ತಿದ್ದಾಗ ತಂದೆಯವರ ಬುದ್ಧಿವಾದದಂತೆ ಬೆಂಗಳೂರಿಗೆ ಬಂದು ಲಾಯರ್ ಹೆಚ್.ಸಿ. ದಾಸಪ್ಪನವರನ್ನು ಕಂಡರು. ಅವರ ಹಿತವಚನಗಳನ್ನು ಪಾಲಿಸಿ ಕೇಂದ್ರೀಯ ನೇಮಕಾತಿ ಮಂಡಳಿಗೆ ಕೆಲಸಕ್ಕೆ ಅರ್ಜಿ ಹಾಕಿದಾಗ ದೊರೆತದ್ದು ಮುನ್ಸೀಫ್ ಕೋರ್ಟ್ ಹೆಡ್ ಮುನ್ಷಿ ಕೆಲಸ. ನಾಗೇಗೌಡರ ವೃತ್ತಿಜೀವನ ಆರಂಭವಾದದ್ದು, ತರೀಕೆರೆ ತಾಲ್ಲೂಕು ನರಸಿಂಹರಾಜಪುರದಲ್ಲಿ, 50 ರೂ. ಸಂಬಳದೊಂದಿಗೆ. 'ಎಡೆಹಳ್ಳಿ' ಎನ್ನುವುದು ನರಸಿಂಹರಾಜಪುರಕ್ಕೆ ಮೊದಲಿದ್ದ ಹೆಸರು. ಊರಿಗೆ ತಕ್ಕ ಕೋರ್ಟು. ನಾಗೇಗೌಡರ ವೈವಾಹಿಕ ಋಣಾನುಬಂಧವೂ ಕೂಡಾ ನರಸಿಂಹರಾಜಪುರದ ವೃತ್ತಿಜೀವನದೊಂದಿಗೆ ಬೆರೆತುಕೊಂಡು ಬಂದಿತು. ನರಸಿಂಹರಾಜಪುರದಲ್ಲಿ ಅವರು ಉಳಿದುಕೊಂಡಿದ್ದ ಮನೆ ಮಾಲೀಕರ ತಂಗಿಯಾದ ಶ್ರೀಮತಿ ಲಕ್ಷ್ಮಮ್ಮನವರನ್ನು ವಿವಾಹವಾದರು. ಕಂಕಣಬಲದೊಂದಿಗೆ ಗೌಡರ ಅದೃಷ್ಟಯೋಗವು ಕೂಡಿ ಬಂದಿತು. ವಿವಾಹನಂತರ ಮೈಸೂರು ಸಿವಿಲ್ ಸರ್ವಿಸ್ ಸ್ಪರ್ಧಾ ಪರೀಕ್ಷೆ ಬರೆದು

25ನೇ ರ್‍ಯಾಂಕ್ ಪಡೆದು ರೆವಿನ್ಯೂ ಪ್ರೊಬೆಷನರಿ ಅಧಿಕಾರಿಯಾಗಿ ಆಯ್ಕೆಯಾದರು. 1941ರಲ್ಲಿ ಗೆಜೆಟೆಡ್ ಹುದ್ದೆ ದೊರೆಯುವುದರೊಂದಿಗೆ ತಿಂಗಳಿಗೆ 80 ರೂ. ಸಂಬಳ ದೊರೆಯಲಾರಂಭಿಸಿತು. ವಿವಿಧ ಇಲಾಖೆಗಳಲ್ಲಿ ವಿವಿಧ ರೀತಿಯ ತರಬೇತಿ ಪಡೆದು ಪ್ರೊಬೇಷನರಿ ಪೂರೈಸಿ 1943ರಲ್ಲಿ ಹರಿಹರದಲ್ಲಿ ಅಮಲ್ದಾರರಾಗಿ ನೇಮಕಗೊಂಡರು. ಹರಿಹರದಲ್ಲಿದ್ದಾಗ ಬಡಜನರಿಗೆ ಇವರು ಸಲ್ಲಿಸಿದ ಸೇವೆ ಗೌಡರನ್ನು ಜನಾನುರಾಗಿಗಳನ್ನಾಗಿಸಿತು. 1947 ರಲ್ಲಿ ತಂದೆ ಕೊನೆಯುಸಿರೆಳೆದರು. ಅದೇ ವರ್ಷದಲ್ಲಿ ಗೌಡರಿಗೆ ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿ ಲಭಿಸಿತು.

ನಾಗೇಗೌಡರು 1941ರಲ್ಲಿ ಗೆಜೆಟೆಡ್ ಅಧಿಕಾರಿಯಾಗಿ ಆಯ್ಕೆಯಾದ ನಂತರ ಎಲ್ಲಿಯೂ ತಿರುಗಿ ನೋಡಲಿಲ್ಲ. ಆಸಕ್ತಿ, ಅಭ್ಯಾಸ, ಕಠಿಣ ಪರಿಶ್ರಮ, ಕೆಲಸದಲ್ಲಿ ಶ್ರದ್ಧೆ, ನಿಷ್ಠೆಗಳ ಫಲವಾಗಿ ಅಧಿಕಾರದ ಒಂದೊಂದೇ ಮೆಟ್ಟಿಲುಗಳನ್ನೇರುತ್ತಾ ಮುನ್ನಡೆದರು. 1943ರಲ್ಲಿ ಹರಿಹರ ಮತ್ತು 1945ರಲ್ಲಿ ದಾವಣಗೆರೆ ತಾಲ್ಲೂಕುಗಳಲ್ಲಿ ಅಮಲ್ದಾರರಾಗಿ, 1947ರಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ಬಡ್ತಿ ಪಡೆದು ಹಾಸನ ಜಿಲ್ಲಾಭಿವೃದ್ಧಿ ಅಧಿಕಾರಿಯಾಗಿ, 1948 ರಲ್ಲಿ ಸರ್ಕಾರದ ವಿದ್ಯಾ ಇಲಾಖೆ ಸಹಾಯಕ ಕಾರ್ಯದರ್ಶಿಯಾಗಿ, 1950ರಲ್ಲಿ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಅಧಿಕಾರಿಯಾಗಿ, 1952ರಲ್ಲಿ ರಾಜ್ಯದ ರೆವಿನ್ಯೂ ಕಮಿಷನರ್ ಅವರ ಪ್ರಥಮ ಅಸಿಸ್ಟೆಂಟರಾಗಿ, 1953ರಲ್ಲಿ ಮೈಸೂರು ಜಿಲ್ಲಾ ಫುಡ್ ಅಸಿಸ್ಟೆಂಟ್ ಮತ್ತು ಮೈಸೂರು ನಗರದ ರೇಷನಿಂಗ್ ಆಫೀಸರ್ ಆಗಿ, 1955 ರಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. 1958ರಿಂದ 61ರವರೆಗೆ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದಾಗ, ಅಂದರೆ 1960 ರಲ್ಲಿ ನಾಗೇಗೌಡರು

ಐ.ಎ.ಎಸ್. ಶ್ರೇಣಿಗೆ ಆಯ್ಕೆಯಾದರು. ನಂತರ, 1961ರಿಂದ ಶಿವಮೊಗ್ಗ ಜಿಲ್ಲೆ, 1963ರಿಂದ ಚಿಕ್ಕಮಗಳೂರು ಜಿಲ್ಲೆ, 1965ರಿಂದ ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಾಗಿ ಅತ್ಯುತ್ತಮವಾದ ಸೇವೆ ಸಲ್ಲಿಸಿ ಜನಪ್ರಿಯತೆ ಪಡೆದರು. 1969ರಲ್ಲಿ ರಾಜ್ಯದ ಲೇಬರ್ ಕಮೀಷನರ್ ಆಗಿ ಅಧಿಕಾರ ವಹಿಸಿಕೊಂಡರು. 1972ರಲ್ಲಿ ಸರ್ವೆ ಇಲಾಖೆ ಮುಖ್ಯಾಧಿಕಾರಿಯಾಗಿದ್ದು, ಎಂಡೋಮೆಂಟ್ ಕಮೀಷನರ್ ಆದರು.

ವಿವಿಧ ಇಲಾಖೆಗಳಲ್ಲಿ ಅಪಾರ ಅನುಭವ ಪಡೆದು ನುರಿತ ಆಡಳಿತಗಾರರೆಂದು ಹೆಸರು ಮಾಡಿದ್ದ ಗೌಡರನ್ನು ಕರ್ನಾಟಕ ಸರ್ಕಾರವು 1973ರಲ್ಲಿ ರಾಜ್ಯದ ಲೋಕ ಸೇವಾ ಆಯೋಗದ ಸದಸ್ಯರನ್ನಾಗಿ ನೇಮಿಸಿತು. ಸುಮಾರು 6 ವರ್ಷಗಳ ಕಾಲ ಲೋಕ ಸೇವಾ ಆಯೋಗದ ಸದಸ್ಯರಾಗಿದ್ದ ನಾಗೇಗೌಡರು ಸಾವಿರಾರು ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಉದ್ಯೋಗ ನೀಡಿದ್ದಾರೆ.

ನಾಗೇಗೌಡರು ತಮ್ಮ 40 ವರ್ಷಗಳ ವೃತ್ತಿ ಜೀವನದಲ್ಲಿ ಎಲ್ಲಿಯೂ ಯಾರಿಂದಲೂ ಬೆರಳುಮಾಡಿ ತೋರಿಸಿಸಿಕೊಂಡವರಲ್ಲ. ಕರ್ತವ್ಯನಿಷ್ಠೆ, ಶ್ರದ್ಧೆ ಶಿಸ್ತಿನಿಂದ ದುಡಿದಿದ್ದಾರೆ. ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿದ್ದಾಗ ಗ್ರಾಮಾಭಿವೃದ್ಧಿಯನ್ನು ಕುರಿತಾದಂತೆ ಕಲ್ಲಚ್ಚಿನ ಮಾಸ ಪತ್ರಿಕೆಯ ಪ್ರಕಟಣೆಗೆ ಕಾರಣರಾದುದಲ್ಲದೆ, ಶಿವಮೊಗ್ಗದಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪನೆ ಮಾಡಿದ ಯಶಸ್ಸು ಗೌಡರದು.

ಸರ್ಕಾರದ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನಾಗೇಗೌಡರ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ಪ್ರತಿಭೆ, ಸಂಘಟನಾಶಕ್ತಿಗಳನ್ನು ಗುರುತಿಸಿದ ರಾಜ್ಯ ಸರ್ಕಾರವು ವಿಧಾನಪರಿಷತ್ತಿನ ಸದಸ್ಯರನ್ನಾಗಿ ನಾಮಕರಣ ಮಾಡಿತು. ಗೌಡರು ಕನ್ನಡ ಸಾಹಿತ್ಯ ಮತ್ತು ಜಾನಪದದ ಬೆಳವಣಿಗೆಗೆ ಮತ್ತಷ್ಟು ಸೇವೆ ಸಲ್ಲಿಸಲು ಅವರಿಗೆ ಹುದ್ದೆ ನೆರವಿಗೆ ಬಂದಿತು.

ನಾಗೇಗೌಡರಲ್ಲಿ ಗ್ರಾಮೀಣ ಮುಗ್ಧತೆ, ಸರಳತೆಗಳು ಹಸಿರಾಯಾಗಿಯೇ ಉಳಿದುಕೊಂಡಿದ್ದವು. ಯಾವುದನ್ನೇ ಆಗಲಿ ನೇರವಾಗಿ ಹೇಳುವ ಪ್ರವೃತ್ತಿ ಅವರದು. ಸಂಕೋಚರಹಿತ ಸರಸ ಸ್ವಭಾವ. ಬದುಕಿನ ಉದ್ದಕ್ಕೂ ರೂಢಿಸಿಕೊಂಡು ಬಂದ ಶಿಸ್ತು, ಪ್ರಾಮಾಣಿಕತೆ, ಇಳಿ ವಯಸ್ಸಿನಲ್ಲಿಯೂ ಕುಳಿತು ಕೆಲಸ ಮಾಡುವ ಜಾಯಮಾನ, ಎಂಥವರಿಂದಲೂ ಕೆಲಸ ತೆಗೆದುಕೊಳ್ಳುವ ಚಾಕಚಕ್ಯತೆ ನಾಗೇಗೌಡರಲ್ಲಿದ್ದಿತು.

ನಾಗೇಗೌಡರದು ಬಹುಮುಖ ಪ್ರತಿಭೆ; ಬಹುಮುಖ ಸಾಧನೆ. ಒಂದು ಕೈಯಲ್ಲಿ ಆಡಳಿತ ಸೂತ್ರವನ್ನು, ಮತ್ತೊಂದು ಕೈಯಲ್ಲಿ ಲೇಖನಿಯನ್ನು ಹಿಡಿದು ಶ್ರೀ ಸಾಮಾನ್ಯರ ಮತ್ತು ಸಾಹಿತ್ಯಸರಸ್ವತಿಯ ಸೇವೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾ ಬಂದರು. ಗೌಡರು ವೃತತ್ತಿಪರ ಲೇಖಕರಲ್ಲ; ಪ್ರವೃತ್ತಿಪರ ಲೇಖಕರು. ಓದಿದ್ದು ಬಿಎಸ್‌ಸಿ, ಎಲ್‌ಎಲ್‌ಬಿ; ಸೇರಿದ್ದು ಆಡಳಿತ ಕ್ಷೇತ್ರ. ಆಸಕ್ತಿ ಮೂಡಿದ್ದು ಕನ್ನಡ ಸಾಹಿತ್ಯ ಮತ್ತು ಜಾನಪದದಲ್ಲಿ. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಉತ್ತಮ ಪಾಂಡಿತ್ಯ, ಪ್ರಭುತ್ವ ಪಡೆದಿದ್ದರು ನಾಗೇಗೌಡರು.

ಸೃಜನಶೀಲ ಕೃತಿಗಳು : 1. ನಾನಾಗುವೆ ಗೀಜಗನ ಹಕ್ಕಿ : ನಾಗೇಗೌಡರು ತಮ್ಮ ತಾರುಣ್ಯದಲ್ಲಿ ರಚಿಸಿದ ಕವನಗಳ ಸಂಕಲನ. ಪುಣೆಯಲ್ಲಿ ಲಾ ಓದುತ್ತಿದ್ದಾಗ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಕಂಡು ಮೂಕವಿಸ್ಮಿತರಾಗಿ ರಚಿಸಿದ ಬಹುಪಾಲು ಕವಿತೆಗಳು ಈ ಸಂಕಲನದಲ್ಲಿವೆ. ಸರೋಜಿನಿ ದೇವಿಯವರ ಕೆಲವು ಕವನಗಳ ಅನುವಾದ ಮತ್ತು ವೆರಿಯಲ್ ಎಲ್ವಿನ್‌ರು ಸಂಗ್ರಹಿಸಿರುವ ಕೆಲವು ಛತ್ತೀಸ್‌ಘರ್ ಜನಪದ ಗೀತೆಗಳ ಅನುವಾದವನ್ನು ಸಹ ಈ ಸಂಕಲನದಲ್ಲಿ

ಸೇರಿಸಲಾಗಿದೆ. ಗೌಡರ ಸ್ವತಂತ್ರ ರಚನೆಗಳಂತೆಯೇ ಅನುವಾದಿತ ಕವನಗಳೂ ಸಹ ಸುಂದರವಾಗಿವೆ, ಆಸ್ವಾದನಾರ್ಹವಾದುವುಗಳಾಗಿವೆ.

2. ಕಥೆ–ವ್ಯಥೆ : ಎಂಟು ನೀಳ್ಗವನಗಳನ್ನು ಒಳಗೊಂಡಿರುವ ಕಥೆ–ವ್ಯಥೆ ಕವನ ಸಂಕಲನವು ನಾಗೇಗೌಡರ ಕಾವ್ಯ ಸ್ವಂತಿಕೆಯನ್ನು ಮೆರೆಯುತ್ತದೆ. ಬದುಕಿನ ಬಗ್ಗೆ ಕವಿಗಿರುವ ಕಳಕಳಿ, ಸಮಾಜಿಕ ಅನಿಷ್ಟಗಳನ್ನು ಕುರಿತಾದ ಹೇವರಿಕೆ, ಆದರ್ಶ–ವಾಸ್ತವ, ಸತ್ಯಮಿಥ್ಯಗಳ ತಾಕಲಾಟ ಇಲ್ಲಿನ ಕವನಗಳಲ್ಲಿ ಕಂಡುಬರುತ್ತದೆ. ಸಂಗ್ರಹದ ಮೊದಲಿನ ನಾಲ್ಕು ಕವನಗಳು ಪ್ರಸಿದ್ಧ ಕವಯತ್ರಿ ತೋರುದತ್ತಳ ಇಂಗ್ಲೀಷ್ ಕವನಗಳ ಭಾವಾನುವಾದಗಳಾಗಿವೆ.

3) ಕಂಡು ಕೇಳಿದ ಕಥೆಗಳು : ನಾಗೇಗೌಡರದು ಹಾಸ್ಯ ಮಿಶ್ರಿತ ಗದ್ಯಶೈಲಿ. ಎಂಟು ಕಥೆಗಳಿಂದ ಕೂಡಿದ ಈ ಕಥಾ ಸಂಕಲನದಲ್ಲಿ ತಾವು ಕಂಡಿದ್ದನ್ನು ಮತ್ತು ಇತರರಿಂದ ಕೇಳಿದ್ದನ್ನು ಕಥೆಯಾಗಿಸಿದ್ದಾರೆ. ಎಲ್ಲಿಯೂ ಕಲ್ಪನೆ ಇಲ್ಲ, ಯಥಾವತ್ ಬದುಕಿನ ಚಿತ್ರಣ.

'ಕಂಡು ಕೇಳಿದ ಕಥೆಗಳು' ನಾಗೇಗೌಡರ ಮೊದಲ ಕಥಾ ಸಂಕಲನ. ಕಥೆಗಾರರ ಭಾಷೆ ಮತ್ತು ಅಭಿವ್ಯಕ್ತಿ ನೇರ, ಸರಳ, ಸ್ಪಷ್ಟ. ಆಡುಮಾತಿನಲ್ಲಿಯೇ ನಿರೂಪಿಸಿದ್ದಾರೆ. ಜನಪದ ನುಡಿಗಟ್ಟುಗಳು, ಗಾದೆಗಳ ಬಳಕೆ ಯಥೋಚಿತವಾಗಿದೆ. ಕಥಾವಸ್ತುವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದರಲ್ಲಿ ನಾಗೇಗೌಡರದು ಪಳಗಿದ ಲೇಖನಿ.

4. ಖೈದಿಗಳ ಕಥೆಗಳು : ಖೈದಿಗಳನ್ನು ಭೇಟಿಮಾಡಿ ಅವರ ಮಾತುಗಳನ್ನು ಧ್ವನಿಮುದ್ರಿಸಿಕೊಂಡು, ಅವರ ಬದುಕಿನ ಸುಖ–ದುಃಖಗಳನ್ನು ಅರಿತು ಕಥೆಗಳನ್ನು ಹೆಣೆದಿದ್ದಾರೆ. ಇಲ್ಲಿ ಬರುವ ಪಾತ್ರಗಳೆಲ್ಲವೂ ಜೀವಂತ ಪಾತ್ರಗಳು. ಈ ಕಥಾ ಸಂಕಲನದಲ್ಲಿ ಒಟ್ಟು

ಹದಿನಾರು ದಾಖಲೆಗಳಿದ್ದು ಅದರಲ್ಲಿ ಆರನ್ನು ಖುದ್ದಾಗಿಯೂ, ಉಳಿದ ಹತ್ತನ್ನು ಫೀಮೇಲ್ ಜೈಲರ್ ತಮ್ಮ ಅಧಿಕಾರದಲ್ಲಿದ್ದಾಗ ಕಂಡದ್ದನ್ನು ನಿರೂಪಿಸಲಾಗಿದೆ. ಮತ್ಸರ, ದ್ವೇಷ, ಅಸೂಯೆ, ಆವೇಶ, ಈರ್ಷ್ಯೆ, ರೊಚ್ಚು, ದ್ರೋಹ, ಲೈಂಗಿಕತೆಯ ಕಾರಣಗಳಿಂದಾಗಿ ಜನರು ಅಪರಾಧಿಗಳಾಗುವುದು, ಸರಳಿನ ಹಿಂದಿದ್ದಾಗ ಅವರು ತಮ್ಮ ತಪ್ಪಿಗೆ ಪಡುವ ಪರಿತಾಪ, ಪಶ್ಚಾತ್ತಾಪ, ತಪ್ಪನ್ನು ಮರೆತು ಋಜುಮಾರ್ಗದಲ್ಲಿ ನಡೆಯಬೇಕೆಂಬ ಅಭೀಪ್ಸೆಯನ್ನು ವ್ಯಕ್ತಪಡಿಸುವುದು, ಎಲ್ಲವೂ ಓದುಗರ ಮನ ಮಿಡಿಯುವಂತೆ ಮಾಡುತ್ತವೆ.

5. ದೊಡ್ಡಮನೆ : ನಶಿಸುತ್ತಿರುವ ನಮ್ಮ ಸಂಸ್ಕೃತಿಯ ಚಿತ್ರವನ್ನು ಗುಣಗಾತ್ರಗಳೆರಡರಲ್ಲೂ ಬೃಹತ್ತಾಗಿ ಚಿತ್ರಿಸುವ ಪ್ರಾದೇಶಿಕ ಕಾದಬರಿ 'ದೊಡ್ಡಮನೆ'. ಬಯಲು ಸೀಮೆಯ ರೈತಾಪಿ ಬದುಕಿನ ದುರಂತ ಚಿತ್ರಣ ಕಾದಂಬರಿಯಲ್ಲಿ ಹೆಪ್ಪುಗಟ್ಟಿದೆ. ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುವ ಗ್ರಾಮೀಣ ಬದುಕಿನ ಸ್ಥಿತ್ಯಂತರಗಳ ದಾಖಲಾತಿ. ಮೂರು ತಲೆಮಾರುಗಳ ಬದುಕಿನ ಸುದೀರ್ಘ ಚಿತ್ರಣ. ಶಿಥಿಲವಾಗುತ್ತಿರುವ ಅವಿಭಕ್ತ ಕೌಟುಂಬಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಮತ್ತು ಅದರ ನಾಶವನ್ನೇ ಬಯಸುವ ಕಾಲ ಹಾಗೂ ವ್ಯಕ್ತಿ ಸಂಘರ್ಷ ಕಾದಂಬರಿಯುದ್ಧಕ್ಕೂ ಒಡಮೂಡಿದೆ.

ದೊಡ್ಡಮನೆ ನಂಜೇಗೌಡರು ಅವಿಭಕ್ತ ಕುಟುಂಬದ ಕೇಂದ್ರವ್ಯಕ್ತಿ. ಲಿಂಗೇಗೌಡ ದೊಡ್ಡಮನೆಯ ಘನತೆಯನ್ನು ಉಳಿಸಿಕೊಳ್ಳಲು ಕಾದಂಬರಿಯುದ್ಧಕ್ಕೂ ಹೋರಾಡುತ್ತಾನೆ. ಆದರೆ ರಂಗೇಗೌಡ ದೊಡ್ಡಮನೆ ಒಡೆದು ಹೋಳಾಗುವಂತೆ ಮಾಡಲು ಎಲ್ಲ ಬಗೆಯ ಕುತಂತ್ರಗಳನ್ನೂ ನಡೆಸುತ್ತಾನೆ. ಈ ಹೋರಾಟದಲ್ಲಿ ರಂಗೇಗೌಡನಿಗೇ ಜಯ ಲಭಿಸುತ್ತದೆ. ದೊಡ್ಡಮನೆ ಒಡೆದು ಹೋಳಾಗುತ್ತದೆ. ಬಯಲು

ಸೀಮೆಯ ಜನಪದದ ಬಾಂಧವ್ಯ, ಗ್ರಾಮೀಣ ಬದುಕಿನ ಸುಖ–ದುಃಖದ ಚಿತ್ರಗಳು, ಕ್ರೋಧ, ರೋಷ, ಸಣ್ಣತನಗಳನ್ನು ಸವಿವರವಾಗಿ, ಪರಿಣಾಮಕಾರಿಯಾಗಿ ಚಿತ್ರಿಸುವ ಮೂಲಕ ಕಾದಂಬರಿಕಾರರು ತಮ್ಮ ಗ್ರಾಮೀಣ ಬದುಕಿನ ಅನುಭವಗಳ ಪರಿಪಕ್ವತೆಯನ್ನು ಮೆರೆದಿದ್ದಾರೆ.

'ದೊಡ್ಡಮನೆ' ಕಾದಂಬರಿಗೆ ಸಾಹಿತ್ಯಕ ಮೌಲ್ಯವಷ್ಟೇ ಅಲ್ಲದೆ, ಸಾಂಸ್ಕೃತಿಕ ಮೌಲ್ಯವೂ ಇದೆ. ಕಾದಂಬರಿಯುದ್ದಕ್ಕೂ ಗೋಚರಿಸುವ ಹಬ್ಬ ಹರಿದಿನಗಳು, ಅಡುಗೆ, ಊಟೋಪಚಾರಗಳು, ವೇಷಭೂಷಣಗಳು, ಮನೆಯ ಮಾದರಿಗಳು, ಜಾತ್ರೆ–ಆಚರಣೆ–ಸಂಪ್ರದಾಯಗಳು, ಗತಿಸಿದ ಸಂಸ್ಕೃತಿಯೊಂದರ ಚಿತ್ರಣವನ್ನು ಮತ್ತೆ ಕಟ್ಟಿಕೊಡುತ್ತವೆ. ಭಾಷೆಯ ದೃಷ್ಟಿಯಿಂದಲಂತೂ ಕನ್ನಡದ ಕಾದಂಬರಿ ಕ್ಷೇತ್ರದಲ್ಲೇ ಅತ್ಯಂತ ವಿಶಿಷ್ಟವಾದುದು. ಕಾದಂಬರಿಯುದ್ಧಕ್ಕೂ ಬಳಕೆಯಾಗಿರುವ ಆಡುಮಾತು, ಜನಪದ ನುಡಿಗಟ್ಟುಗಳು, ಬೈಗುಳಗಳು, ಗಾದೆ, ಒಗಟುಗಳು ಅಧ್ಯಯನಕ್ಕೆ ಆಕರಗಳಾಗಿವೆ.

6. **ಸೊನ್ನೆಯಿಂದ ಸೊನ್ನೆಗೆ** : ಜನಪದ ಕತೆಯೊಂದರ ಎಳೆ ಹಿಡಿದು ಹುಟ್ಟಿಕೊಂಡ ಈ ಕಾದಂಬರಿಯ ಆಶಯ ಕೆಟ್ಟವರು ಕೊನೆಗೆ ಕೆಟ್ಟದ್ದನ್ನೇ ಅನುಭವಿಸುತ್ತಾರೆ ಎಂಬುದು. ಮೈಲಾರದ ಮೂಲಪುರುಷರ ಚರಿತ್ರೆಯ ಮೂಲಕ ಆರಂಭಾಗುವ ಕಾದಂಬರಿಯು ಊರದೇವರ ಒಕ್ಕಲಾಗದೆ, ಊರವನಾಗದೆ ಉಳಿದ ಚನ್ನಯ್ಯನ ದುರಾಸೆಯ ಫಲವಾಗಿ ಶಾಪಕ್ಕೊಳಗಾಗಿ ಆತನ ವಂಶವೇ ನಿರ್ನಾಮವಾಗುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ಧೂಪದ ಚನ್ನ ಈ ಕಾದಂಬರಿಯ ಕಥಾನಾಯಕನಾಗಿದ್ದರೂ ಸಂಗಣ್ಣ ಮತ್ತು ಕುಂಡಪ್ಪ ಈ ಕಾದಂಬರಿಯ ಎರಡು ತಲೆಮಾರುಗಳ ಪ್ರತಿನಿಧಿಗಳಾಗಿ ಕಂಡುಬರುತ್ತಾರೆ. ನಾಗೇಗೌಡರ ವಿಶಿಷ್ಟತೆ ಇರುವುದು ಅವರು ತಮ್ಮ ಬರವಣಿಗೆಯಲ್ಲಿ ಕಟ್ಟಿಕೊಡುವ

ಜನಪದ ಸಂಸ್ಕೃತಿಯ ಚಿತ್ರಣದಲ್ಲಿ. ಜನಪದ ಸಂಸ್ಕೃತಿಯ ಸಮೃದ್ಧ ವಿವರಗಳು ಈ ಕಾದಂಬರಿಯ ಉದ್ದಕ್ಕೂ ಚೆಲ್ಲಾಡಿವೆ. ತಾವು ಕಂಡುಂಡ ಗ್ರಾಮೀಣ ಬದುಕನ್ನು ರಸವತ್ತಾಗಿ ವರ್ಣಿಸುವಲ್ಲಿ ನಾಗೇಗೌಡರು ಎತ್ತಿದ ಕೈ.

7. ಭೂಮಿಗೆ ಬಂದ ಗಂಧರ್ವ : ಮಾಸ್ತಿಯವರ 'ಸುಬ್ಬಣ್ಣ', ಅ.ನ.ಕೃ. ಅವರ 'ಸಂಧ್ಯಾರಾಗ', ತ.ರಾ.ಸು. ಅವರ 'ಹಂಸಗೀತೆ' ಪರಂಪರೆಯಲ್ಲಿ ಮೂಡಿ ಬಂದ ಮತ್ತೊಂದು ಶ್ರೇಷ್ಠ ಕೃತಿ ನಾಗೇಗೌಡರ 'ಭೂಮಿಗೆ ಬಂದ ಗಂಧರ್ವ'. ಭೈರವಿ ಕೆಂಪೇಗೌಡರ ಬದುಕನ್ನು ಚಿತ್ರಿಸುವ ಈ ಕಾದಂಬರಿಯನ್ನು ಕುರಿತು ಪ್ರೊ. ವಿ.ಕೃ.ಗೋಕಾಕ್ ಹೀಗೆ ಅಭಿಪ್ರಾಯ ಪಡುತ್ತಾರೆ: "ಭೈರವಿ ಕೆಂಪೇಗೌಡರೆಂಬ ಖ್ಯಾತ ಸಂಗೀತಗಾರರ ಜೀವನದ ಸರ್ವಸ್ವಾರಸ್ಯವನ್ನು 'ಭೂಮಿಗೆ ಬಂದ ಗಂಧರ್ವ" ಎಂಬ ಶ್ರೇಷ್ಠ ಕಾದಂಬರಿಯಲ್ಲಿ ಒದಗಿಸಿಕೊಟ್ಟು ಕನ್ನಡನಾಡಿನ ಮನದಲ್ಲಿ ಶಾಶ್ವತವಾಗಿ ಇರುವಂತೆ ಮಾಡಿದ್ದಾರೆ". ನಾಗೇಗೌಡರಿಗೆ ಭೈರವಿ ಕೆಂಪೇಗೌಡರ ಬಗ್ಗೆ ಅಪಾರ ಅಭಿಮಾನವಿದೆ. ಚರಿತ್ರೆಯಲ್ಲಿ ಹೆಸರಾದ ಹತ್ತು ಹಲವು ಪಾತ್ರಗಳು ಕಾದಂಬರಿಯಲ್ಲಿ ಗೋಚರಿಸುತ್ತವೆ.

8. ನನ್ನೂರು : ನಾಗೇಗೌಡರ ಹುಟ್ಟೂರಾದ ಹೆರಗನಹಳ್ಳಿಯ ಕಳೆದುಹೋದ ಜನಸಮುದಾಯದ ಬದುಕಿನ ಚಿತ್ರಣ. ತಾವು ಹುಟ್ಟಿದ ಊರಿನ, ಕಂಡ ವ್ಯಕ್ತಿಗಳ ಬದುಕಿನ ಯಥಾವತ್ತಾದ, ರಸವತ್ತಾದ ಅಭಿವ್ಯಕ್ತಿ. ಈ ಸಂಕಲನದಲ್ಲಿ ಕಂಡುಬರುವ ಎಲ್ಲಾ ವ್ಯಕ್ತಿಗಳು ಹೆರಗನಹಳ್ಳಿಯ ಮಣ್ಣಿನಿಂದ ಮೂಡಿಬಂದವರು. ತೆರೆದ ಕಣ್ಣುಗಳಿಂದ ತಮ್ಮೂರಿನ ಬದುಕನ್ನು ಬಿಚ್ಚುಮನಸ್ಸಿನಿಂದ ಚಿತ್ರಿಸಿದ್ದಾರೆ. ಈ ಕೃತಿಯನ್ನು ಕುರಿತು ಕುವೆಂಪು ಅವರು "ಒಂದು ಊರಿನ ಜನ, ಬಾಳು, ಸಂಸ್ಕೃತಿ, ಮೇಲು ಕೀಳು, ಆಚಾರ, ಮತ, ಮೌಢ್ಯ, ಕೆಚ್ಚು, ಗ್ರಾಮೀಣ ರಸಿಕತೆ,

ಬಲದೌರ್ಬಲ್ಯ, ಎಲ್ಲವೂ ಸಮಗ್ರವಾಗಿ ಗೋಚರವಾಗಿ ನಿಮ್ಮ ಊರು 'ನನ್ನೂರು' ಆಗಿಬಿಡುತ್ತದೆ. ಇಂಥ ಗ್ರಾಮ ಜೀವನದ ಅಪೂರ್ವ ಪರಿಚಯದ ಕೃತಿ ಕನ್ನಡಕ್ಕೆ ಹೊಸ ಕೊಡುಗೆಯಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೃತಿಯಲ್ಲಿ ಬಳಕೆಯಾಗಿರುವ ಜನಪದ ಬೈಗುಳಗಳು, ನುಡಿಗಟ್ಟುಗಳು, ಗಾದೆ ಮಾತುಗಳು ಬರವಣಿಗೆಗೆ ಮೊನಚು ಮತ್ತು ಅನನ್ಯತೆಯನ್ನು ತಂದುಕೊಟ್ಟಿದ್ದು ಅತ್ಯುತ್ತಮ ಜಾನಪದ ಕೃತಿಯಾಗಿಯೂ ಕೂಡಾ ಕಂಗೊಳಿಸುತ್ತದೆ.

9. **ಬೆಟ್ಟದಿಂದ ಬಟ್ಟಲಿಗೆ :** ಕಾಫಿಯ ಉಗಮ, ವಿಲಾಸ, ವ್ಯಾಪ್ತಿ, ವೈಶಿಷ್ಟ್ಯಗಳನ್ನು ಅಂಕಿ–ಅಂಶಗಳೊಡನೆ ಸರಳವಾಗಿ ನಿರೂಪಿಸುವ ಈ ಕೃತಿಯು ನಾಗೇಗೌಡರು ಕನ್ನಡ ಸಾಹಿತ್ಯಕ್ಕೆ ನೀಡಿದ ಅಪರೂಪದ ಕೊಡುಗೆ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾಗಿದ್ದಾಗ ಅಲ್ಲಿನ ಕಾಫಿ ತೋಟಗಳ ಪ್ರತ್ಯಕ್ಷಾನುಭವ, ಕಾಫಿ ತೋಟದ ಮಾಲೀಕರುಗಳ ಒಡನಾಟ ಈ ಕೃತಿಯ ಹುಟ್ಟಿಗೆ ಕಾರಣ. ಅಧ್ಯಯನಶೀಲತೆ, ವಿಷಯ ಸಂಗ್ರಹಣೆ, ಭಾಷಾ ಶೈಲಿ ಎದ್ದು ಕಾಣುವ ಅಂಶಗಳು.

10. **ಸರೋಜಿನಿ ದೇವಿ :** 1879ರ ಫೆಬ್ರವರಿ 18ರಲ್ಲಿ ಹೈದರಾಬಾದಿನ ಸುಶಿಕ್ಷಿತ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಸರೋಜಿನಿದೇವಿ ನಾಯ್ಡು ಅವರ ಜೀವನ ಚರಿತ್ರೆ. ಸೌದರ್ಯಾರಾಧಕಿ, ನಿಸರ್ಗೋಪಾಸಕಿಯಾದ ಸಹೃದಯ ಸರೋಜಿನಿಯ ಕಾವ್ಯ ಬದುಕು, ಹೋರಾಟದ ಬದುಕನ್ನು ಸರಳವಾಗಿ, ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. 'ಸರೋಜಿನಿ ಕಟ್ಟುಕವಿಯಲ್ಲ, ಹುಟ್ಟುಕವಿ' ಎಂದು ಅಭಿಮಾನ ಪಡುವ ಕೃತಿಕಾರರು ಪ್ರತಿಯೊಂದು ಅಧ್ಯಾಯಕ್ಕೂ ನೀಡಿರುವ ಶೀರ್ಷಿಕೆಗಳು ಅರ್ಥಗರ್ಭಿತವಾಗಿವೆ.

11. ನಾ ಕಂಡ ಪ್ರಪಂಚ : ಜಗತ್ತಿನ ಪೂರ್ವ ಮತ್ತು ಪಶ್ಚಿಮ ದೇಶಗಳನ್ನು ಸಂದರ್ಶಿಸಿ ಬಂದ ನಾಗೇಗೌಡರು ಅಲ್ಲಿನ ಜನಜೀವನ, ಸಂಸ್ಕೃತಿ, ಸಂಪ್ರದಾಯ ಇವೇ ಮೊದಲಾದವುಗಳನ್ನು ಕುರಿತಾದಂತೆ ತಮ್ಮ ಎಂದಿನ ಸರಸಮಿಶ್ರಿತ ಶೈಲಿಯಲ್ಲಿ ನಿರೂಪಿಸಿರುವ ಪ್ರವಾಸ ಕಥನ. ಪುಸ್ತಕವನ್ನು ಓದುತ್ತಾ ಹೋದಂತೆ ಗೌಡರು ವರ್ಣಿಸುತ್ತಿರುವ ಸ್ಥಳಗಳಿಗೆ ನಾವೇ ಭೇಟಿನೀಡಿದಂತೆ ಅನುಭವವಾಗುತ್ತದೆ.

ಅನುವಾದ ಕೃತಿಗಳು : 1) ಕೆನಿಲ್ ವರ್ತ್ : ತನ್ನ ಬದುಕಿನಲ್ಲಿ ಅನೇಕ ಲಾವಣಿ, ಹಲವಾರು ಕಾದಂಬರಿಗಳನ್ನು ರಚಿಸಿ ಅಪಾರ ಯಶಸ್ಸುಗಳಿಸಿ 1832ರಲ್ಲಿ ಮರಣ ಹೊಂದಿನ ಸರ್ ವಾಲ್ಟರ್ ಸ್ಕಾಟ್‌ನ ಕಾದಂಬರಿ ಕೆನಿಲ್‌ವರ್ತ್. ಸ್ಕಾಟ್‌ನ ಭಾಷೆ ಕನ್ನಡದ ಜಾಯಮಾನಕ್ಕೆ ಒಗ್ಗುವಂಥದ್ದಲ್ಲ. ಆದರೆ ನಾಗೇಗೌಡರು ಅದನ್ನು ಸಮರ್ಥವಾಗಿ ದುಡಿಸಿಕೊಂಡು ಕನ್ನಡಕ್ಕೆ ಒಗ್ಗಿಸಿದ್ದಾರೆ. ಕಾದಂಬರಿಯ ನಾಯಕಿ ಅಮಿ ಮತ್ತು ನಾಯಕ ಲೀಸೆಸ್ಟೈರ್‌ನ ಭವಿಷ್ಯವನ್ನು ನಿರ್ಣಯಿಸುವ ಭವನದ ಹೆಸರೇ ಕೆನಿಲ್‌ವರ್ತ್. ನಾಗೇಗೌಡರು ಮೂಲದ ಸೊಗಡನ್ನು, ಅಂದಚಂದವನ್ನು ಎಲ್ಲಿಯೂ ಬಿಟ್ಟುಕೊಡದೆ, ಕಥೆಯ ಓಟಕ್ಕೆ ಧಕ್ಕೆ ತಗುಲದಂತೆ ಸಮಪರ್ಕಕವಾಗಿ ಸಂಗ್ರಹಾನುವಾದ ಮಾಡಿದ್ದಾರೆ.

2) ಮಾರ್ಕೊಪೋಲೋ ಪ್ರವಾಸ ಕಥನ : ಮಾರ್ಕೊಪೋಲೋ ಪ್ರವಾಸ ಕಥನ ಕನ್ನಡ ಪ್ರವಾಸ ಸಾಹಿತ್ಯ ಭಂಡಾರಕ್ಕೆ ನಾಗೇಗೌಡರು ಕೊಟ್ಟ ಅತ್ಯುತ್ತಮ ಕೊಡುಗೆ. ಮಧ್ಯ ಏಷ್ಯದ ಅನೇಕ ಭಾಗಗಳ ಬಗ್ಗೆ, ವಿಸ್ತಾರವಾದ ಚೀನಾ ಸಾಮ್ರಾಜ್ಯದ ಬಗ್ಗೆ ಮಾರ್ಕೊಪೋಲೋನದೆ ಅಧಿಕೃತವಾದ ಹೇಳಿಕೆ. ಸಂಕ್ಷಿಪ್ತವಾದ ಸಂಗ್ರಹಾನುವಾದ ಪುನರಾವರ್ತನೆಗಳಿಂದ ಹೊರತಾಗಿದೆ. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಹೇಳಬೇಕಾದುದನ್ನು ಸ್ಪಷ್ಟವಾಗಿ ತಿಳಿಯಪಡಿಸುತ್ತಾರೆ.

3) ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ : ಇಂಗ್ಲೆಂಡಿನಲ್ಲಿ ಹುಟ್ಟಿ ಪಾದ್ರಿಯಾಗಿ ಭಾರತಕ್ಕೆ ಬಂದು, ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ, ಭಾರತೀಯ ಸಂಸ್ಕೃತಿಗೆ ಮನಸೋತು, ಭಾರತೀಯ ಗಿರಿಜನರ ಬದುಕಿನ ಅಧ್ಯಯನ–ಉದ್ಧಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಗಿರಿಜನ ಕನ್ಯೆಯನ್ನೇ ಮದುವೆಯಾಗಿ ಭಾರತದ ಪೌರತ್ವವನ್ನು ಪಡೆದು ಇಲ್ಲಿಯೇ ನೆಲೆ ನಿಂತ ಎಲ್ವಿನರು ಮೊದಲಿಗೆ ಮಾನವತಾವಾದಿ, ನಂತರದಲ್ಲಿ ಮಾನವ ವಿಜ್ಞಾನಿ. ಇವರ ಆತ್ಮಚರಿತ್ರೆಯೇ 'The Tribal world of Verrier Elvin'. ಇಂತಹ ಮಹಾನ್ ವ್ಯಕ್ತಿಯ ಆತ್ಮಚರಿತ್ರೆಯನ್ನು ಕನ್ನಡಕ್ಕೆ ಅನುವಾದಿಸುವುದರ ಮುಖಾಂತರ ಮಾನವವಿಜ್ಞಾನ, ಜಾನಪದ, ಸಮಾಜ ವಿಜ್ಞಾನ ಕ್ಷೇತ್ರಗಳನ್ನು ಕನ್ನಡದಲ್ಲಿ ಅರಿಯಬಲ್ಲವರಿಗೆ ಮಹದುಪಕಾರ ಮಾಡಿದ್ದಾರೆ ನಾಗೇಗೌಡರು. ಎಲ್ವಿನ್‌ರ ಬರವಣಿಗೆಯ ಸೊಬಗನ್ನು ಆಸ್ವಾದಿಸಿ ಅನುವಾದಿಸಿರುವ ಗೌಡರು ಅತ್ಯಂತ ಆತ್ಮೀಯವಾಗಿ ಕೃತಿಯನ್ನು ಅನುವಾದಿಸಿದ್ದಾರೆ. ವಿದ್ವತ್ಪೂರ್ಣವಾದ ಪೀಠಿಕೆಯನ್ನು ಬರೆದು, ಕ್ರೈಸ್ತಮಿಷನರಿಗಳ ಸಮಗ್ರ ಮಾಹಿತಿ ನೀಡಿರುವುದಲ್ಲದೆ, ಎಲ್ವಿನ್ನರ ಸಾಧನೆಗಳನ್ನು ತಿಳಿಸಿಕೊಟ್ಟಿದ್ದಾರೆ. ಕೃತಿಯ ಪೀಠಿಕೆಯು ಕೃತಿಯ ಮಹತ್ವವನ್ನು ವೃದ್ಧಿಗೊಳಿಸಿದೆ.

4) ಪ್ರವಾಸಿ ಕಂಡ ಇಂಡಿಯಾ : ಅನಾದಿಕಾಲದಿಂದಲೂ ಜಗತ್ತಿನ ನಾನಾ ಮೂಲೆಗಳಿಂದ ನಾನಾ ಕಾರಣಗಳಿಗಾಗಿ ಭಾರತಕ್ಕೆ ಪ್ರವಾಸಿಗರು ಬಂದು ಹೋಗಿದ್ದಾರೆ; ಬರುತ್ತಿದ್ದಾರೆ. ಕೆಲವರು ಇಲ್ಲಿನ ಬದುಕು, ಸಂಸ್ಕೃತಿಯನ್ನು ಅರಿಯಲು ಬಂದರೆ ಮತ್ತೆ ಕೆಲವರು ವ್ಯಾಪಾರ ವಹಿವಾಟು ಮಾಡಿ ಧನ ಸಂಪಾದನೆಗೆ ಬಂದಿದ್ದಾರೆ. ಇನ್ನೂ ಕೆಲವರು ಧರ್ಮಪ್ರಚಾರ, ತೀರ್ಥಯಾತ್ರೆ, ಪುಣ್ಯಪ್ರಾಪ್ತಿಗಾಗಿ ಬಂದುಹೋಗಿದ್ದಾರೆ. ಹೀಗೆ ಬಂದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಭಾರತದ ಬಗ್ಗೆ,

ಭಾರತೀಯರ ಬಗ್ಗೆ, ಇಲ್ಲಿನ ಜನರ ಬದುಕು, ಸಂಸ್ಕೃತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ತಂತಮ್ಮ ಭಾಷೆಗಳಲ್ಲಿ ಬರೆದಿದ್ದಾರೆ. ಅವೆಲ್ಲವೂ ಬಹುತೇಕ ಇಂಗ್ಲಿಷ್ ಭಾಷೆಯಲ್ಲಿವೆ. ಹೀಗೆ ಇಂಗ್ಲಿಷ್ ಭಾಷೆಯಲ್ಲಿ ಹುದುಗಿ ಹೋಗಿದ್ದ ಹತ್ತು ಹಲವು ಪ್ರವಾಸಿಗಳ ದಾಖಲೆಗಳನ್ನು ಹುಡುಕಿ, ಕ್ರೋಢೀಕರಿಸಿ ಅಧ್ಯಯನ ಮಾಡಿ ಅವುಗಳೆಲ್ಲವನ್ನೂ ಕನ್ನಡಕ್ಕೆ ತಂದ ಕೀರ್ತಿ ಎಚ್.ಎಲ್. ನಾಗೇಗೌಡರದು.

'ಪ್ರವಾಸಿ ಕಂಡ ಇಂಡಿಯಾ' ಎಂಬ ಶೀರ್ಷಿಕೆಯಲ್ಲಿ ಎಂಟು, ಬೃಹತ್ ಸಂಪುಟಗಳನ್ನು 1964 ರಿಂದ ಅನುವಾದಿಸುತ್ತಾ ಬಂದಿರುವ ನಾಗೇಗೌಡರು ಈ ಸಂಪುಟಗಳುದ್ದಕ್ಕೂ ಓದುಗರಿಗೆ ಸಾಹಿತಿಗಳಾಗಿ, ವಿಮರ್ಶಕರಾಗಿ, ಇತಿಹಾಸಕಾರರಾಗಿ ಮತ್ತು ಭಾಷಾಂತರಕಾರರಾಗಿ ಗೋಚರಿಸುತ್ತಾರೆ. ಸುಮಾರು 500 ಪುಟಗಳಷ್ಟಿರುವ ಮೊದಲ ಸಂಪುಟದಲ್ಲಿ ಕ್ರಿ.ಪೂ. 5ನೆಯ ಶತಮಾನದಿಂದ ಕ್ರಿ.ಶ. 14ನೆಯ ಶತಮಾನದವರೆಗಿನ ಒಟ್ಟು 38 ಗ್ರೀಕ್, ರೋಮನ್, ಚೀನಾ ಮತ್ತು ಅರಬ್ ಪ್ರವಾಸಿಗಳ, ಭೂಗೋಳ ಶಾಸ್ತ್ರಜ್ಞರ ಹಾಗೂ ಇತಿಹಾಸಕಾರರ ಭಾರತದ ಬಗೆಗಿನ ವರ್ಣನೆ, ವೃತ್ತಾಂತ ವಿವರಗಳನ್ನು ಅನುವಾದಿಸಿದ್ದಾರೆ. ಎರಡನೆಯ ಸಂಪುಟದಲ್ಲಿ ಕ್ರಿ.ಶ. 13ನೆಯ ಶತಮಾನದಿಂದ 17ನೆಯ ಶತಮಾನದ ಕೊನೆಯವರೆಗೆ ಭಾರತವನ್ನು ಸಂದರ್ಶಿಸಿದ 23 ಪ್ರವಾಸಿಗಳ ಕಥನವನ್ನು ನೀಡಿದ್ದಾರೆ. ಕರ್ನಾಟಕದ ಇತಿಹಾಸವನ್ನು ಕುರಿತಾದಂತೆ ಹಾಗೂ ವಿಜಯನಗರ ಸಾಮ್ರಾಜ್ಯದ ಬಗ್ಗೆ ಹೆಚ್ಚಿನ ವಿವರಗಳು ಈ ಸಂಪುಟದಲ್ಲಿ ಲಭ್ಯವಿರುವುದರಿಂದ ಕನ್ನಡಿಗರಿಗೆ ಈ ಸಂಪುಟ ಬಹುಮುಖ್ಯವಾದುದಾಗಿದೆ. ವಿಷಯ ವೈವಿಧ್ಯ ಮತ್ತು ನಿರೂಪಣೆಯ ದೃಷ್ಟಿಯಿಂದ ಸ್ವಾರಸ್ಯಕರವಾಗಿದ್ದು ಕ್ರಿ.ಶ. 1579ರಿಂದ 1619ರವರೆಗೆ ಭೇಟಿ ನೀಡಿದ 16 ಮಂದಿ ಐರೋಪ್ಯ ಪ್ರವಾಸಿಗಳ ಕಥನಗಳನ್ನು

ಕಟ್ಟಿಕೊಡುತ್ತಾರೆ. 'ಜಗತ್ತಿನ ಬಗ್ಗೆ ಹತ್ತು ಜನರು ಹೇಳುವುದನ್ನು ಕೇಳುವುದಕ್ಕಿಂತ ಒಂದು ಬಾರಿ ಕಣ್ಣಿಂದ ನೋಡುವುದು ಉತ್ತಮ' ಎಂಬ ಅಭಿಪ್ರಾಯವನ್ನಿರಿಸಿಕೊಂಡು ಪ್ರವಾಸ ಹೊರಟ ಇಟಲಿಯ ಲೋಡೋವಿ ಕೊದಿವತ್ತಿಯಾನಿಂದ (1506–1508) ಜರ್ಮನಿಯ ಮಾಡೆಲ್ ಸ್ಲೊ (1638–1640)ವರೆಗಿನ 15 ಮಂದಿ ಪ್ರವಾಸಿಗಳ ವರ್ಣನೆಗಳನ್ನು ನಾಲ್ಕನೆಯ ಸಂಪುಟವು ಒಳಗೊಂಡಿದ್ದರೆ, ಐದನೆಯ ಸಂಪುಟದಲ್ಲಿ ಫ್ರಾನ್ಸ್ ದೇಶದ ಫ್ರಾನ್ಸ್‌ಸ್ವಾಸ್ ಬೆರ್‌ನ್ಯೇ (1658–1667) ಮತ್ತು ಬ್ಯಾಪ್ಟಿಸ್ಟ್ ಟಾವೆರ್‌ನ್ಯೇ (1641–1667) ಎನ್ನುವ ಇಬ್ಬರು ಪ್ರವಾಸಿಗರ ಕಥನಗಳಿವೆ. ಆರನೆಯ ಸಂಪುಟವು ಇಟಲಿಯ ಏಕೈಕ ಪ್ರವಾಸಿಯಾದ ಮನೂಚಿಯ ಕಥನಕ್ಕೆ ಮೀಸಲಾಗಿದ್ದರೆ, ಏಳನೆಯ ಸಂಪುಟವು ಕ್ರಿ.ಶ. 1608 ರಿಂದ 1686ರವರೆಗಿನ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ಹತ್ತುಮಂದಿ ವಿದೇಶಿ ಪ್ರವಾಸಿಗರ ಕಥನಗಳ ಅನುವಾದ ಸಂಗ್ರಹವಾಗಿದೆ. ಎಂಟನೆಯ ಸಂಪುಟದಲ್ಲಿ ಪ್ರ.ವ. 1603 ರಿಂದ 1844 ರವರೆಗಿನ ಹನ್ನೆರಡು ಮಂದಿ ಪ್ರವಾಸಿಗರ ಅನುಭವಗಳಿವೆ. ಇವರಲ್ಲಿ ದಕ್ಷಿಣ ಕರ್ನಾಟಕದ ವಿಷಯಗಳು ಹೆಚ್ಚಾಗಿವೆ.

ಈ ಸಂಪುಟಗಳ ವಿಶೇಷವನ್ನು, ನಾಗೇಗೌಡರು ಮೊದಲ ಸಂಪುಟದಲ್ಲಿಯೇ ಪ್ರಾಮಾಣಿಕವಾಗಿ ನಿವೇದಿಸಿಕೊಂಡಿದ್ದಾರೆ : ಭಾರತಕ್ಕೆ ಸಂಬಂಧಿಸಿದಂತೆ ವಿವಿಧ ದೇಶದ, ವಿವಿಧ ಉದ್ದೇಶದ ಪ್ರವಾಸಿಗಳ ವರದಿ–ವೃತ್ತಾಂತಗಳನ್ನು ಬೇರೆ ಬೇರೆ ಆಕರಗಳಿಂದ ಸಂಗ್ರಹಿಸಿ, ಕನ್ನಡಿಸಿ, ಅವಶ್ಯವಾದಲ್ಲಿ ವಿಶ್ಲೇಷಿಸಿ ವೈಜ್ಞಾನಿಕ ಸಂಗ್ರಹ ಮಾಡಿರುತ್ತೇನೆ.

ಪ್ರತಿಯೊಬ್ಬ ಪ್ರವಾಸಿಯ ಪ್ರವಾಸಕಥನವನ್ನು ವಿವರಿಸುವುದಕ್ಕೆ ಮೊದಲು ಗೌಡರು ಆ ಪ್ರವಾಸಿಯ ಜೀವನ ಮತ್ತು ವ್ಯಕ್ತಿತ್ವವನ್ನು ಪರಿಚಯಿಸುತ್ತಾರೆ. ಪ್ರವಾಸಿಗಳ ಹೇಳಿಕೆಗಳನ್ನು ತಿದ್ದಿ ಸರಿಯೆ ಇಲ್ಲವೆ

ತಪ್ಪೆ ಎಂಬುದಕ್ಕೆ ಆಧಾರ ಸಹಿತ ಅಡಿಟಿಪ್ಪಣಿಗಳನ್ನು ನೀಡಿದ್ದಾರೆ. ಸುದೀರ್ಘವಾದ ಉಪಯುಕ್ತ ಪ್ರಸ್ತಾವನೆ, ಗ್ರಂಥಋಣ ನೀಡಿರುವುದರಿಂದ ಗ್ರಂಥದ ಉಪಯುಕ್ತತೆ ಇಮ್ಮಡಿಸಿದೆ. ನಾಗೇಗೌಡರ ಭಾಷೆ ಸರಳವೂ ಸ್ಪಷ್ಟವೂ ಆಗಿರುವುದರಿಂದ ನಿರೂಪಣೆ ಸೊಗಸಾಗಿದೆ, ಸ್ವಾರಸ್ಯಕರವಾಗಿದೆ, ಸರಾಗವಾಗಿದೆ. ಇಂತಹುದೊಂದು ಅದ್ಭುತವಾದ, ಮಹತ್ತರವಾದ ಕಾರ್ಯವನ್ನು ನಿರ್ವಹಿಸುವುದರ ಮೂಲಕ ನಾಗೇಗೌಡರು ಕನ್ನಡಿಗರೆಲ್ಲರ ಕೃತಜ್ಞತೆಗಳಿಗೆ ಪಾತ್ರರಾಗಿದ್ದಾರೆ. ರಾಷ್ಟ್ರಕವಿ ಕುವೆಂಪು ಪ್ರವಾಸಿ ಕಂಡ ಇಂಡಿಯಾ ಸಂಪುಟಗಳ ಬಗ್ಗೆ ಹೀಗೆ ಹೇಳಿದ್ದಾರೆ : "ಪ್ರವಾಸಿ ಕಂಡ ಇಂಡಿಯಾ" ನಾಗೇಗೌಡರ ವಿದ್ವತ್ತಿಗೂ, ಅವರ ಅನುಪಮ ಸಾಹಸಕ್ಕೂ ಕನ್ನಡಿಯಾಗಿದ್ದು, ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಅದ್ವಿತೀಯ ಕೊಡುಗೆಯಾಗಿದೆ. ಸುಮಾರು ಎರಡೂವರೆ ಸಾವಿರ ವರ್ಷಗಳ ಬಹು ವರ್ಣರಂಜಿತವೂ ನಾನಾವಿಧ ಮನೋಧರ್ಮ ಸಂಪ್ರದಾಯ ಸಮೃದ್ಧವೂ ಆದ ಭಾರತೀಯ ಜೀವನದ ಇತಿಹಾಸದ ಪುನಸೃಷ್ಟಿ ಇಲ್ಲಿ ನಡೆದಿದೆ. ಇತಿಹಾಸಕಾರರಿಗೆ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೃಷಿ ಮಾಡುವವರಿಗೆ, ಸಮಾಜ ಹಾಗೂ ಜನಾಂಗ ವಿಜ್ಞಾನಿಗಳಿಗೆ, ಜಾನಪದ ವಿದ್ವಾಂಸರಿಗೆ, ಪುರಾತತ್ವ ಸಂಶೋಧಕರಿಗೆ, ಸಾಹಿತಿಗಳಿಗೆ ಇದೊಂದು ತವನಿಧಿ ರೂಪದ ಆಕರಗ್ರಂಥವಾಗಿದೆ. ಸೀಮಾಕೃತಿಯಂತಿರುವ ಈ ಅಮೂಲ್ಯಗ್ರಂಥ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ."

ಜಾನಪದ

ನಾಗೇಗೌಡರ ಮತ್ತೊಂದು ಆಸಕ್ತ ಕ್ಷೇತ್ರ ಜಾನಪದ. ಕನ್ನಡ ಜಾನಪದಕ್ಕೆ ಅವರು ಸಲ್ಲಿಸಿರುವ ಸೇವೆ ಅವಿಸ್ಮರಣೀಯವಾದುದು. ಸಾಹಿತ್ಯಕವಾಗಿ, ಸಾಂಘಿಕವಾಗಿ, ಸಾಂಸ್ಥಿಕವಾಗಿ ಜಾನಪದಕ್ಕೆ ಅವರು ನೀಡಿರುವ ಕೊಡುಗೆ ಅತ್ಯಂತ ಅಮೂಲ್ಯವಾದುದು.

ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ನಾಗೇಗೌಡರ ಬದುಕಿನ ಉಸಿರು. ಹುಟ್ಟಿನಿಂದಲೇ ಜಾನಪದ ಪ್ರೀತಿ ಅವರಲ್ಲಿ ರಕ್ತಗತವಾಗಿತ್ತು. ತಾವು ಬಿ.ಎಸ್‌ಸಿ. ಓದುತ್ತಿರುವಾಗಲೇ ಜನಪದ ಸಾಹಿತ್ಯ ಸಂಗ್ರಹದತ್ತ ಗಮನ ಹರಿಸಿದ್ದರು. ಜನಪದ ಸಾಹಿತ್ಯದ ಬಗ್ಗೆ ಅವರಿಗೆ ಅಪಾರವಾದ ಒಲವು. ಸಾಹಿತ್ಯ ಸಂರಕ್ಷಣೆಯ ಬಗ್ಗೆ ಅಪರಿಮಿತವಾದ ಉತ್ಸಾಹ. ಸರ್ಕಾರದ ಅಧಿಕಾರಿಯಾಗಿದ್ದಾಗ ಗ್ರಾಮೀಣರ ಒಡನಾಟದಿಂದಾಗಿ ಅವರ ಮನಸ್ಸು ಜಾನಪದದತ್ತ, ಜನಪದ ಸಂಸ್ಕೃತಿಯನ್ನು ಬೆಳೆಸುವತ್ತ, ಸಂಸ್ಕೃತಿಯ ಪ್ರತಿಬಿಂಬಗಳಾದ ಗ್ರಾಮೀಣ ವಸ್ತುಗಳನ್ನು ಉಳಿಸುವತ್ತ ತುಡಿಯಲಾರಂಭಿಸಿತು. ಅವರು ಜಾನಪದ ಕ್ಷೇತ್ರಕ್ಕೆ ತಮ್ಮನ್ನು ಒಪ್ಪಿಸಿಕೊಂಡರು. 1971ರ ಅಕ್ಟೋಬರ್ 27, 28 ಮತ್ತು 29ರ ಈ ಮೂರು ದಿನಗಳ ಕಾಲ ನಾಗಮಂಗಲದಲ್ಲಿ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ' ನಡೆಯಲು ಮೂಲ ಕಾರಣರಾದರು. ರಾಷ್ಟ್ರಕವಿ ಕುವೆಂಪುರವರನ್ನು ಬರಮಾಡಿಕೊಂಡು ಜಾನಪದ ತೇರು ಮುನ್ನಡೆಯಲು ಕಾರಣಕರ್ತರಾದರು. ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾಗ ಅವರು ಮಂಗಳೂರಿನಲ್ಲಿ ನಡೆಸಿದ ಜನಪದ ಕಲಾ ಮಹೋತ್ಸವಗಳು ಮತ್ತು ಅಖಿಲ ಕರ್ನಾಟಕ ದ್ವಿತೀಯ ಜಾನಪದ ಮಹಾಸಮ್ಮೇಳನವು ಜಾನಪದ ಕ್ಷೇತ್ರದ ಅಚ್ಚಳಿಯದ ದಾಖಲೆಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಗಳನ್ನು ಬಳಸಿಕೊಂಡು ಕ್ಷೇತ್ರ ಕಾರ್ಯಕರ್ತರನ್ನು ಪ್ರತಿ ಜಿಲ್ಲೆಗೂ ನೇಮಿಸಿ ಜನಪದ ಕಲೆಗಳ ಬಗ್ಗೆ ವ್ಯಪಕವಾಗಿ ಮಾಹಿತಿ ಸಂಗ್ರಹಕಾರ್ಯವನ್ನು ನಡೆಸಿದರು. ಅನೇಕ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕಲಾಮಹೋತ್ಸವಗಳು ನಡೆದವು. ರಾಜ್ಯಮಟ್ಟದ ಕಲಾ ಮಹೋತ್ಸವವಂತೂ ಅತ್ಯಂತ ಅದ್ದೂರಿಯಾಗಿ ನಡೆಯಿತು. ಕರ್ನಾಟಕದ ಜನಪದ ಕಲೆಗಳ ಬಗ್ಗೆ ಗ್ರಂಥಗಳ ಪ್ರಕಟಣೆ,

ಜನಪದ ಕಲೆಗಳ ಚಲನ ಚಿತ್ರೀಕರಣ, ನಾಡಿನ ಜನಪದ ಸಾಹಿತ್ಯದ ಪ್ರಕಟಣೆ ಇಂಥ ಕೆಲವು ಪ್ರಮುಖ ಚಟುವಟಿಕೆಗಳ ಹಿನ್ನೆಲೆಯಲ್ಲಿ ನಾಗೇಗೌಡರ ಜಾನಪದ ಆಸಕ್ತಿ ವಿಶೇಷವಾಗಿ ಕೆಲಸ ಮಾಡಿರುವುದನ್ನು ಕಾಣಬಹುದು.

ಸರ್ಕಾರವನ್ನು ಬಲವಾಗಿ ಒತ್ತಾಯಿಸಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ'ಯ ಸ್ಥಾಪನೆಗೆ ಕಾರಣರಾದರು. ಎರಡು ಅವಧಿಗಳ ಕಾಲ ಅಕಾಡೆಮಿಯ ಅಧ್ಯಕ್ಷರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದರು.

ಜನಪದ ಕಲಾವಿದರನ್ನು ಕಂಡರೆ ನಾಗೇಗೌಡರಿಗೆ ಅನನ್ಯವಾದ ಪ್ರೀತಿ. ಅವರ ಕ್ಷೇಮಾಭ್ಯುದಯದ ಬಗ್ಗೆ ಅಪಾರವಾದ ಕಾಳಜಿ. ಅವರಿಗಾಗಿ ಗೌಡರು ಸಾಕಷ್ಟು ಹಣ ಖರ್ಚುಮಾಡಿದ್ದಾರೆ. ಕಷ್ಟ, ಕಾಯಿಲೆ ಎಂದು ಬಂದವರಿಗೆ ಹಣ ಕೊಟ್ಟಿದ್ದಾರೆ. ಅವರ ಮಕ್ಕಳಿಗೆ ಕೆಲಸ ಕೊಡಿಸಿದ್ದಾರೆ. ಮನೆ ಮಾರು, ಜಮೀನು ಕೊಡಿಸಿದ್ದಾರೆ. ಸೋಬಾನೆಯವರು, ಕೋಲಾಟದವರು, ಗೊಂಬೆಯಾಟದವರು, ದೊಂಬಿದಾಸರು, ಹೆಳವರು ಅನೇಕ ಬಗೆಯ ಕಲಾವಿದರನ್ನು ಬರಮಾಡಿಕೊಂಡು ಅವರ ನಡುವೆ ಕಾಲ ಕಳೆಯುವುದೆಂದರೆ ನಾಗೇಗೌಡರಿಗೆ ಇನ್ನಿಲ್ಲದ ಆನಂದವಾಗಿತ್ತು.

ಜನಪದ ಕಲೆ, ಸಂಸ್ಕೃತಿ, ಆಚರಣೆಗಳನ್ನು ಕುರಿತಾದಂತೆ ನಾಗೇಗೌಡರ ಮಾರ್ಗದರ್ಶನದಲ್ಲಿ ಮೂಡಿಬಂದ 'ಸಿರಿಗಂಧ' ಎಂಬ ಶೀರ್ಷಿಕೆಯ ಜಾನಪದ ದಾಖಲಾತಿ ಸಾಕ್ಷ್ಯಚಿತ್ರವು ನೂರಾ ಎಂಟು ಕಂತುಗಳಲ್ಲಿ ಬೆಗಳೂರು ದೂರದರ್ಶನದಲ್ಲಿ ಪ್ರಸಾರವಾಗಿದ್ದು ಆಬಾಲವೃದ್ಧರಾದಿಯಾಗಿ ಎಲ್ಲರ ಮನಸ್ಸನ್ನು ರಂಜಿಸಿದೆ.

ಸಾಹಿತ್ಯಕ ಜಾನಪದ ಸಾಧನೆ

ಸಂಘ ಸಂಸ್ಥೆಗಳ ಮೂಲಕ ಜಾನಪದ ಚಟುವಟಿಕೆಗಳಿಗೆ ಪ್ರೇರಕರಾಗಿ ನಿಂತ ನಾಗೇಗೌಡರು ಅತ್ಯುತ್ತಮ ಜಾನಪದ ಸಂಗ್ರಾಹಕ, ಸಂಶೋಧಕರಾಗಿ ಹೆಸರಾಗಿದ್ದಾರೆ.

1) ಸೋಬಾನೆ ಚಿಕ್ಕಮ್ಮನ ಪದಗಳು : ನಾಗೇಗೌಡರು ಸಂಗ್ರಹಿಸಿ, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಸೋಬಾನೆ ಚಿಕ್ಕಮ್ಮನ ಪದಗಳು' ಕನ್ನಡ ಜನಪದ ಗೀತ ಸಂಗ್ರಹಗಳಲ್ಲಿ ಅತ್ಯುತ್ತಮ ಕೃತಿಯಾಗಿದೆ. ತಮ್ಮ ಹುಟ್ಟೂರಾದ ಹೆರಗನಹಳ್ಳಿಯ ಸೋಬಾನೆ ಚಿಕ್ಕಮ್ಮನಂಥ ಪ್ರತಿಭಾವಂತ ಕಲಾವಿದೆಯ ಸಮಗ್ರ ಸಾಹಿತ್ಯವನ್ನು ಸಂಗ್ರಹಿಸುವುದರ ಮೂಲಕ ಕನ್ನಡಕ್ಕೆ ಉಳಿಸಿಕೊಟ್ಟಿದ್ದಾರೆ. ಚಿಕ್ಕಮ್ಮನೆಂದರೆ ನಾಗೇಗೌಡರಿಗೆ ಅಪಾರವಾದ ಗೌರವ. ಆಕೆಯ ಸಾಹಿತ್ಯವನ್ನು ಮತ್ತೆ ಮತ್ತೆ ಸಂಗ್ರಹಿಸಿ ಮರೆತುಹೋದ ಭಾಗಗಳನ್ನು ಹೆಕ್ಕಿ ತೆಗೆದಿದ್ದಾರೆ.

'ಸೋಬಾನೆ ಚಿಕ್ಕಮ್ಮನ ಪದಗಳು' ಸಂಕಲನವು ಕನ್ನಡ ಜನಪದ ಗೀತ ಸಂಗ್ರಹಗಳಲ್ಲಿ ಅನೇಕ ದೃಷ್ಟಿಗಳಿಂದ ಮುಖ್ಯವಾದುದಾಗಿದ್ದು ತನ್ನದೇ ಆದ ಸ್ಥಾನವನ್ನು ಕಾಯ್ದುಕೊಂಡಿದೆ. ಕಾಲದ ದೃಷ್ಟಿಯಿಂದ, ಸತ್ವದ ದೃಷ್ಟಿಯಿಂದ, ಹಾಡುಗಳಲ್ಲಿನ ಶ್ರೀಮಂತ ಗುಣದ ದೃಷ್ಟಿಯಿಂದ ಆದ್ಯಕೃತಿ ಎನಿಸಿಕೊಂಡಿದೆ. ನಾಗೇಗೌಡರದು ಅಚ್ಚುಕಟ್ಟಾದ ಸಂಗ್ರಹ ಕಾರ್ಯ. ಸಂಪಾದನೆಯ ಹಂತದಲ್ಲಿ ಪ್ರಯೋಗಗಳನ್ನು ಕೈಗೊಂಡಿರುವುದಲ್ಲದೆ ಆ ಹಾಡುಗಳಿಗೆ ಸ್ವರ ಪ್ರಸ್ತಾರ ಹಾಕಿಸಿ ಅವುಗಳನ್ನು ಶಾಸ್ತ್ರೀಯವಾದ ಧಾಟಿಗಳಲ್ಲಿ ಕ್ರಮಬದ್ಧಗೊಳಿಸಿ ಸಂಗೀತ ಬಲ್ಲವರಿಂದ ಏಕ ಕ್ರಮದಲ್ಲಿ ಹಾಡುವಂತಹ ಅನುಕೂಲ ಮಾಡಿಕೊಟ್ಟಿರುವ ಮೊತ್ತಮೊದಲ ಪ್ರಯತ್ನ ಅವರದಾಗಿದೆ.

ಮದುವೆ ಹಾಡುಗಳ ಮಟ್ಟಿಗಂತೂ ಇದು ಹೆಚ್ಚು ಸಮಗ್ರವಾದ ಸಂಗ್ರಹವಾಗಿದೆ. ಸೋಬಾನೆ ಚಿಕ್ಕಮ್ಮನ ಜೀವನಚರಿತ್ರೆಯನ್ನು ವಕ್ತೃವಿನ ನಿರೂಪಣಾ ವಿಧಾನದೊಂದಿಗೆ ಅತ್ಯಂತ ಆಪ್ತವಾಗಿ ದಾಖಲಿಸಿರುವುದು ಗಮನಾರ್ಹ ಅಂಶವಾಗಿದೆ. ಹಾಡುಗಳಿಗೆ ಸಂಬಂಧಿಸಿದಂತೆ ನಾಗೇಗೌಡರು ಒದಗಿಸಿರುವ ಟಿಪ್ಪಣಿಗಳು, ಬಹುಮಟ್ಟಿಗೆ ಸಮರ್ಪಕವಾಗಿದ್ದು, ಹಾಡುಗಳ ಅರ್ಥ ತಿಳಿಯಲು, ಸಂಬಂಧಪಟ್ಟ ಜನರ ಜೀವನ ಕ್ರಮ ಮತ್ತು ನಂಬಿಕೆ, ಸಂಪ್ರದಾಯಗಳನ್ನರಿಯಲು ನೆರವಿಗೆ ಬರುತ್ತವೆ. ವಿಷಯ ನಿರೂಪಣೆಯಲ್ಲಿ ಅನೇಕ ವಿವರಗಳಿವೆ. ಸಂಪಾದಕರು ತಮ್ಮ ಗಾಢವಾದ ಜಾನಪದ ತಿಳುವಳಿಕೆಯಿಂದ ಅನೇಕ ಶಬ್ದಗಳಿಗೆ ಅರ್ಥಗಳನ್ನು ನೀಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ 'ಸೋಬಾನೆ ಚಿಕ್ಕಮ್ಮನ ಪದಗಳು' ಕೃತಿಯ ಸಂಗ್ರಹ ಮತ್ತು ಸಂಪಾದನಾ ಕಾರ್ಯವು ಸಮಗ್ರವೂ ಪರಿಪೂರ್ಣವೂ ಆಗಿರುತ್ತದೆ.

2) ಪದವವೆ ನಮ್ಮ ಎದೆಯಲ್ಲಿ : ನಾಗೇಗೌಡರು ಸಂಪಾದಿಸಿ, ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಿಸಿರುವ ಈ ಗೀತಸಂಕಲನದಲ್ಲಿ ಹನ್ನೊಂದು ದಳಗಳಿದ್ದು, ಒಂದೊಂದು ದಳದಲ್ಲೂ ಒಂದೊಂದು ಪ್ರಕಾರಕ್ಕೆ ಸಂಬಂಧಪಟ್ಟ ಗೀತೆಗಳಿವೆ. ಈ ಬೃಹತ್ ಗೀತ ಸಂಕಲನದಲ್ಲಿ ಸೋಬಾನೆ ಪದಗಳು, ಒಸಗೆ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು, ಕೋಲಾಟದ ಪದಗಳು, ಲಾಲಿ ಪದಗಳು, ಬಾಂಧವ್ಯದ ಪದಗಳು, ದೇವಿ ಮತ್ತು ದೇವರು, ಹಾಡ್ಗತೆಗಳು, ಹೊಗಳುವ ಪದಗಳು ಇತ್ಯಾದಿ ಪ್ರಕಾರಗಳಿವೆ. ಈ ಸಂಕಲದಲ್ಲಿರುವ ಗೀತೆಗಳನ್ನು ಗಂಡಸರು, ಹೆಂಗಸರು, ಮಕ್ಕಳುಗಳಿಂದ ಬೇರೆ ಬೇರೆ ಪ್ರದೇಶಗಳಲ್ಲಿ, ಬೇರೆ ಬೇರೆ ಅವಧಿಯಲ್ಲಿ ಸಂಗ್ರಹಿಸಿದ್ದಾರೆ. ಇಲ್ಲಿನ ಗೀತ ಸಾಹಿತ್ಯದ ವಕ್ತೃಗಳು ವಿಭಿನ್ನ ಸಂಸ್ಕೃತಿ, ವಿಭಿನ್ನ ವಯೋಮಾನಕ್ಕೆ ಸೇರಿದವರಾದುದರಿಂದ

ಅವರು ಹಾಡಿರುವ ಸಾಹಿತ್ಯದಲ್ಲಿಯೂ ಅದರ ಪರಿಣಾಮವು ಗೋಚರಿಸುತ್ತದೆ.

3) ಕರ್ನಾಟಕ ಜನಪದ ಕಥೆಗಳು : ನಾಗೇಗೌಡರ ಮೂರನೆಯ ಸಂಕಲನವಾದ ಈ ಕೃತಿಯು ಜನಪದ ಕಥೆಗಳ ಸಂಕಲನ. ಸಮಗ್ರ ಕರ್ನಾಟಕದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಈ ಸಂಗ್ರಹ ಮಹತ್ವದ್ದಾಗಿದೆ. ಈ ಸಂಕಲನದಲ್ಲಿ ಕರ್ನಾಟಕದ 19 ಜಿಲ್ಲೆಗಳನ್ನು ಪ್ರತಿನಿಧಿಸುವ ಸುಮಾರು ನೂರು ಕಥೆಗಳಿವೆ.

4) ಹೆಳವರು ಮತ್ತು ಅವರ ಕಾವ್ಯಗಳು : ಸುಮಾರು 15 ವರ್ಷಗಳ ಸಂಶೋಧನೆಯ ಫಲವಾಗಿ ರೂಪುಗೊಂಡ ಕೃತಿ. 63 ಪುಟಗಳಷ್ಟು ಸುದೀರ್ಘವಾದ ಪ್ರಸ್ತಾವನೆಯೊಂದಿಗೆ 378 ಪುಟಗಳಲ್ಲಿ ಹೆಳವರು ಮತ್ತು ಅವರ ಕುಲಗಳ ಮೂಲ ಹಾಗೂ ಅವರು ಹಾಡುವ ಕಾವ್ಯಗಳನ್ನು ವಿಸ್ತಾರವಾಗಿ ನಿರೂಪಿಸಿದ್ದಾರೆ. ಅನುಬಂಧದಲ್ಲಿ ಹೆಳವರ ಬಗ್ಗೆ ಇರುವ ಪುರಾಣ, ಕಥೆ, ಶಾಸನವನ್ನು ಸಂಪಾದಿಸಿಕೊಟ್ಟಿದ್ದಾರೆ. ಹೆಳವರನ್ನು ಕುರಿತಾದ ಹೆಚ್ಚಿನ ಅಧ್ಯಯನಕ್ಕೆ ಈ ಕೃತಿ ಆಕರಗ್ರಂಥ.

5) ಎಸೆನ್ಷಿಯಲ್ಸ್ ಆಫ್ ಕರ್ನಾಟಕ ಫೋಕ್‌ಲೋರ್ : ಕರ್ನಾಟಕದ ಜಾನಪದ ಪರಂಪರೆಯನ್ನು ಕನ್ನಡೇತರರಿಗೆ ಮತ್ತು ಪಾಶ್ಚಾತ್ಯರಿಗೆ ತಿಳಿಯಪಡಿಸುವ ಉದ್ದೇಶದಿಂದ ನಾಗೇಗೌಡರು ವಿಶ್ರಾಂತ ಇಂಗ್ಲಿಷ್ ಪ್ರಾಧ್ಯಾಪಕರಾದ ಎಚ್.ಎ. ರಾಮಕೃಷ್ಣ ಅವರೊಂದಿಗೆ ಸೇರಿ ಸುಮಾರು 400 ಪುಟಗಳ ಇಂಗ್ಲೀಷ್ ಕೃತಿಯನ್ನು ರಚಿಸಿದ್ದಾರೆ. Essentials of Karnatka Folklore ಎಂಬ ಈ ಕೃತಿಯು ಸುಮಾರು 64 ವರ್ಣ ಚಿತ್ರಗಳನ್ನು, 16 ಕಪ್ಪುಬಿಳುಪು ಚಿತ್ರಗಳನ್ನು ಒಳಗೊಂಡಿದೆ. ಇವೆಲ್ಲವೂ ಕರ್ನಾಟಕ ಜನಪದ ಕಲೆಗಳಿಗೆ ಸಂಬಂಧಪಟ್ಟ ಚಿತ್ರಗಳಾಗಿರುತ್ತವೆ. ಸಮಗ್ರ ಕರ್ನಾಟಕ ಜಾನಪದವನ್ನು ಸ್ಥೂಲವಾಗಿ

ಪರಿಚಯಿಸುವ ಈ ಕೃತಿಯು ಕನ್ನಡೇತರರಿಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಿಕೊಡುತ್ತದೆ.

6) ಕನ್ನಡ ಜಾನಪದ ಕೋಶ : ಕನ್ನಡದಲ್ಲಿ ಅನೇಕ ನಿಘಂಟುಗಳಿವೆ. ಆದರೆ ಪ್ರತ್ಯೇಕವಾಗಿ ಜಾನಪದಕ್ಕೆ ಮೀಸಲಾದ ಶಬ್ದಾರ್ಥ ನಿಘಂಟು ಎಂಬುದಿರಲಿಲ್ಲ. ಈ ಕೊರತೆಯನ್ನು ಮನಗಂಡ ನಾಗೇಗೌಡರು, ಬಳಕೆ ತಪ್ಪುತ್ತಿರುವ ಗ್ರಾಮೀಣ ಶಬ್ದಗಳನ್ನು ಗುರುತಿಸಿ ಅವುಗಳ ಅರ್ಥ, ವಿಶೇಷಾಂಶಗಳು, ಪ್ರಯೋಗಗಳೊಂದಿಗೆ ಕನ್ನಡ ಜಾನಪದ ಕೋಶವನ್ನು ರಚಿಸುವ ಯೋಜನೆಯನ್ನು ಹಮ್ಮಿಕೊಂಡರು. ಫಲವಾಗಿ ನಾಗೇಗೌಡರ ಪ್ರಧಾನ ಸಂಪಾದಕತ್ವದಲ್ಲಿ ಸುಮಾರು ಒಂದು ಸಾವಿರ ಪುಟಗಳ ವ್ಯಾಪ್ತಿಯಲ್ಲಿ ಸುಮಾರು 15000ಕ್ಕೂ ಹೆಚ್ಚು ಜನಪದ ಶಬ್ದಗಳನ್ನು ಸಂಗ್ರಹಿಸಿ ಅವುಗಳಿಗೆ ಅರ್ಥ, ಪ್ರಯೋಗ, ವಿಶೇಷಾಂಶಗಳನ್ನು ನೀಡಿ ಕನ್ನಡ ಜಾನಪದ ಕೋಶವನ್ನು ಹೊರ ತಂದಿದ್ದಾರೆ. ಜಾನಪದ ಆಸಕ್ತರು, ವಿದ್ಯಾರ್ಥಿಗಳು, ಅಭ್ಯಾಸಿಗಳಿಗೆ ಇದೊಂದು ಅಮೂಲ್ಯವಾದ ಆಕರ ಗ್ರಂಥ. ಈ ಕೋಶವನ್ನು ಟಿ.ಆರ್. ಮಹಾದೇವಯ್ಯನವರು ಸಂಪಾದಿಸಿಕೊಟ್ಟಿದ್ದಾರೆ.

ಮೇಲಿನ ಜಾನಪದ ಕೃತಿಗಳೇ ಅಲ್ಲದೆ ನಾಗೇಗೌಡರ ಪ್ರಧಾನ ಸಂಪಾದಕತ್ವದಲ್ಲಿ, ಚಕ್ಕೆರೆ ಶಿವಶಂಕರ್ ಸಂಪಾದಿಸಿಕೊಟ್ಟಿರುವ 'ಮೈಲಾರ ಲಿಂಗನ ಕಾವ್ಯ' ವು ಗೊರವರ ಸಂಸ್ಕೃತಿಯ ಮೂಲ ಪುರುಷನಾದ ಮೈಲಾರಲಿಂಗ ತುಪ್ಪದ ಮಲ್ಲಮ್ಮನನ್ನು ಲಗ್ನವಾದ ಕಥೆಯನ್ನು ಅತ್ಯಂತ ಸ್ವಾರಸ್ಯಕರವಾಗಿ ನಿರೂಪಿಸುತ್ತದೆ. ಈ ಕಾವ್ಯವನ್ನು ಗೊರವರ ಕೆಂಚಮಲ್ಲಯ್ಯ ಹಾಡಿದ್ದಾರೆ. ಎಸ್.ಪಿ. ಪದ್ಮಪ್ರಸಾದ್ ಸಂಪಾದಿಸಿ ಕೊಟ್ಟಿರುವ 'ಗ್ರಾಮದೇವತೆ ಮಾರಮ್ಮ' ಕೃತಿಯು ಮಾರಮ್ಮನ ಪುರಾಣವನ್ನು ನಿರೂಪಿಸುತ್ತದೆ. ಈ ಕಾವ್ಯವನ್ನು ನೆಲಮಂಗಲದ,

ಚೌಡಿಕೆ ಸುಬ್ಬಯ್ಯ ಹಾಡಿದ್ದಾರೆ. ಇವುಗಳೇ ಅಲ್ಲದೆ 'ಹಾಡಾನ ಬನ್ನಿ ದನಿಯೆತ್ತಿ', 'ಹಾವು ತುಳಿದೇನೆ' ಎಂಬ ಗ್ರಾಮದೇವತೆ ಮಾಲಿಕೆಗಳ ಚಿಕ್ಕ ಪುಸ್ತಿಕೆಗಳು ಸಹ ನಾಗೇಗೌಡರ ಸಂಪಾದಕತ್ವದಲ್ಲಿ ಪ್ರಕಟವಾಗಿವೆ. ನಾಗೇಗೌಡರ ನಿಧನಾನಂತರ, ಅವರು ಸಂಗ್ರಹಿಸಿದ್ದ ಸಾಹಿತ್ಯದ ಪ್ರಕಟಣೆಯ ಯೋಜನೆಯನ್ನು ರೂಪಿಸಿದೆ. ಕೆಲವು ಗ್ರಂಥಗಳು ಪ್ರಕಟವಾಗಿವೆ.

7) **ಜಾನಪದ ಜಗತ್ತು** : ನಾಗೇಗೌಡರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಾ ಬಂದ ಕನ್ನಡದ ಏಕೈಕ ತ್ರೈಮಾಸಿಕ ಪತ್ರಿಕೆ 'ಜಾನಪದ ಜಗತ್ತು' ಪ್ರತ್ಯೇಕವಾಗಿ ಜಾನಪದಕ್ಕೆ ಮೀಸಲಾದ ಪತ್ರಿಕೆ. ಕರ್ನಾಟಕ ಜಾನಪದಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿಚಾರಗಳನ್ನು ಪ್ರಕಟಿಸುತ್ತಾ ಬಂದಿರುವ ಈ ಪತ್ರಿಕೆಯು ಹೊರತಂದಿರುವ ಮಡಿಲಕ್ಕಿ. ಹೂವು-ಹೊಂಬಾಳೆ, ಸ್ಥಳನಾಮಗಳು, ಮಾರಮ್ಮ, ದೆವ್ವ ಜಾನಪದ, ರೋಗ ಜಾನಪದ ಮುಂತಾದ ವಿಶೇಷ ಸಂಚಿಕೆಗಳು ಜನಪದ ವಿದ್ಯಾರ್ಥಿಗಳು, ಆಸಕ್ತರು, ಸಂಶೋಧಕರುಗಳಿಗೆ ಅತ್ಯಂತ ಉಪಯುಕ್ತವಾದುದಾಗಿದೆ. ಈ ಪತ್ರಿಕೆ ಈಗಲೂ ಪ್ರಕಟವಾಗುತ್ತಿದೆ.

ಸಾಂಸ್ಥಿಕ ಸಾಧನೆ : ನಾಗೇಗೌಡರು ಸರಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ ಅನಂತರ, ಅವರ ಅಭಿನಂದನ ಸಮಾರಂಭದಲ್ಲಿ ಸಾರ್ವಜನಿಕರು ಪ್ರೀತಿಯಿಂದ ನೀಡಿದ 1,15,100 ರೂಗಳ ನಿಧಿಯನ್ನು ಮುದುವಟ್ಟನ್ನಾಗಿರಿಸಿ 1979ರಲ್ಲಿ ಕರ್ನಾಟಕ ಜಾನಪದ ಟ್ರಸ್ಟ್‌ನ್ನು ಪ್ರಾರಂಭಿಸಿದರು. ಜಾನಪದ ಟ್ರಸ್ಟಿನ ಪ್ರಾರಂಭದೊಳಗೆ ಅವರ ಜನಪದ ಚಟುವಟಿಕೆಗಳು ನಿರಂತರವಾಗಿ ಮುನ್ನಡೆದವು. ನಾಡಿನಾದ್ಯಂತ ಲೆಕ್ಕವಿಲ್ಲದಷ್ಟು ಬಾರಿ ಸಂಚರಿಸಿ, ಸಾವಿರಾರು ಕಲಾವಿದರನ್ನು ಭೇಟಿಯಾಗಿ ಜನಪದ ಗೀತೆ, ಕಥೆ, ಗಾದೆ, ಒಗಟು ಮೊದಲಾದ ಜನಪದ ಸಾಹಿತ್ಯ

ಪ್ರಕಾರಗಳನ್ನು ಧ್ವನಿಮುದ್ರಿಸಿಕೊಂಡರು. ಪ್ರಸ್ತುತ ನಾಗೇಗೌಡರ ಧ್ವನಿಮುದ್ರಣ ಭಂಡಾರದಲ್ಲಿ ಸುಮಾರು 1500 ಗಂಟೆಗಳ ಕಾಲ ಕೇಳಬಹುದಾದಷ್ಟು ಧ್ವನಿಮುದ್ರಿಕೆಗಳಿವೆ. ಜನಪದ ಕಲೆ, ಹಬ್ಬ, ಜಾತ್ರೆ ಆಚರಣೆ ಮೊದಲಾದವುಗಳ ಛಾಯಾಚಿತ್ರ ದಾಖಲಾತಿ ಮಾಡಿದರು. ಪ್ರಸ್ತುತ ಒಂದು ಸಾವಿರಕ್ಕೂ ಹೆಚ್ಚು ವರ್ಣ ಪಾರದರ್ಶಿಕೆಗಳು ಅವರ ಛಾಯಾಚಿತ್ರ ಭಂಡಾರದಲ್ಲಿವೆ. ನಾಡಿನಾದ್ಯಂತ ಸಂಚರಿಸಿ ವಿಡಿಯೋ ಚಿತ್ರೀಕರಣ ನಡೆಸಿದ್ದಾರೆ. ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾದ ನೂರಾ ಎಂಟು ಕಂತುಗಳ 'ಸಿರಿಗಂಧ' ಜನಪದ ಧಾರವಾಹಿ ಚಿತ್ರೀಕರಣವು ಸೇರಿದಂತೆ ಸುಮಾರು 800 ಗಂಟೆಗಳಿಗೂ ಹೆಚ್ಚು ಕಾಲ ನೋಡಬಹುದಾದ ವಿಡಿಯೋ ಕ್ಯಾಸೆಟ್‌ಗಳು ವಿಡಿಯೋ ಭಂಡಾರದಲ್ಲಿವೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಬಳಿ ಸುಮಾರು 15 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ 'ಜಾನಪದ ಲೋಕ'ವು ನಾಗೇಗೌಡರು ಕಂಡ ಹಲವು ವರ್ಷಗಳ ಕನಸಿನ ಕೂಸು. ಈ ಕನಸು ಅವರ ಕಠಿಣ ಪರಿಶ್ರಮ, ಸಂಘಟನಾ ಶಕ್ತಿಯ ಬಲದಿಂದಾಗಿ 1994ರ ಮಾರ್ಚ್ 12 ರಂದು ನನಸಾಯಿತು. ಜಾನಪದ ಲೋಕವು ದೇಶದ ಅತ್ಯಂತ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿ ಬೆಳವಣಿಗೆ ಕಂಡಿದೆ.

ಜಾನಪದ ಲೋಕದ ಮಹತ್ವದ ಆಕರ್ಷಣೆಯೇ ಅದರ ಮಹಾದ್ವಾರ. ಹರಿಗೆ ಮತ್ತು ಕೊಂಬುಗಳಿಂದ ಅಲಂಕೃತವಾದ ವಿಶಾಲ ಮಹಾದ್ವಾರ. ಇಕ್ಕೆಲಗಳಲ್ಲಿ ಎತ್ತರದ ನಂದೀಧ್ವಜಗಳು. ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡರ ಸಂಮಿಲನ ಈ ಮಹಾದ್ವಾರದ ರಚನೆಯಲ್ಲಡಗಿದೆ. ಒಳಹೋಗುತ್ತಿದ್ದಂತೆ ಎದ್ದು ಕಾಣುವ ಬೀಸುವ ಕಲ್ಲಿನ ಅರ್ಥಪೂರ್ಣವಾದ ಲೋಕದ ಲಾಂಛನ. ಕೋಣಗಳನ್ನು ಕಟ್ಟಿ ಎಳೆಸುತ್ತಿದ್ದ ಬೃಹತ್ತಾದ ಬೀಸುವ ಕಲ್ಲು. ಅಡಿಗೆ ಮನೆಯ ವಿವಿಧ

ವಸ್ತುಗಳ ಸಂಗ್ರಹಾಲಯವಾದ ಲೋಕಮಾತಾ ಮಂದಿರ. ಚಿತ್ರದಲ್ಲೇ ಚಿತ್ತ ಸೆಳೆಯುವ ಚಿತ್ರಕುಟೀರ. ಸುಮಾರು ಐದು ಸಾವಿರ ಅದ್ಭುತ ವಸ್ತುಗಳ ವೈವಿಧ್ಯಮಯ ಸಂಗ್ರಹಾಲಯ ಲೋಕಮಹಲ್. ವಿಶ್ರಾಂತಿ ಮಂದಿರ. ಪುರುಷೋತ್ತಮ ಕುಟೀರ, ಕಲಾವಿದರು ತಂಗಲೆಂದೇ ನಿರ್ಮಿಸಿರುವ ತೊಟ್ಟಿ ಕಂಬಗಳನ್ನುಳ್ಳ ದೊಡ್ಡಮನೆ. ಕಲ್ಲಿನಲ್ಲಿ ಕತೆ ಹೇಳುವ ಶಿಲ್ಪ ಮೇಳ, ಆಯಗಾರದ ಮೇಳ. ಜಾನಪದ ಲೋಕವನ್ನು ವೀಕ್ಷಿಸಲೆಂದು ಬರುವವರನ್ನು ಹರಸಲೆಂದೇ ಇಲ್ಲಿ ನೆಲೆಯಾಗಿರುವ ಲೋಕಪ್ರಿಯ ಮಹಾಗಣಪತಿ ದೇವಸ್ಥಾನ, ಸುಮಾರು 800 ರಿಂದ 1000 ಮಂದಿ ಕುಳಿತುಕೊಳ್ಳಬಹುದಾದ ಗ್ರೀಕ್ ಮಾದರಿಯ ಬೃಹತ್ತಾದ ಬಯಲು ರಂಗಮಂದಿರ, ಮಕ್ಕಳ ಮನರಂಜನೆಗೆ ಎತ್ತಿನಗಾಡಿ ಸವಾರಿ, ಕುದುರೆ ಸವಾರಿ, ಆಟವಾಡಲು ವಿಶಾಲವಾದ ಆಟದ ಮೇಳ, ದೋಣಿ ವಿಹಾರ ಇತ್ಯಾದಿ ಎಲ್ಲವೂ ಜಾನಪದ ಲೋಕದಲ್ಲಿವೆ.

ಕರಕುಶಲ ಕಲಾವಿದರು ಈ ಕೇಂದ್ರದಲ್ಲಿದ್ದುಕೊಂಡು ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಡೊಳ್ಳುಕುಣಿತ, ಸುಗ್ಗಿ ಕುಣಿತ, ಕೋಲಾಟ, ಗೊರವರ ಕುಣಿತ ಇವೇ ಮೊದಲಾದ ಕಲೆಗಳ ತರಬೇತಿ ನೀಡಿ ಜಾನಪದ ಲೋಕದ್ದೇ ಆದ ಕಲಾತಂಡಗಳನ್ನು ರೂಪಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯವು ಜಾನಪದ ಲೋಕವನ್ನು ಸಂಶೋಧನಾ ಕೇಂದ್ರವಾಗಿ ಮಾನ್ಯ ಮಾಡಿದೆ. ಜಾನಪದ ಮಹಾವಿದ್ಯಾಲಯವು ಪ್ರಾರಂಭವಾಗಿದ್ದು, ಈ ಮಹಾವಿದ್ಯಾಲಯದಲ್ಲಿ ಜಾನಪದ ಡಿಪ್ಲೊಮೋ ಮತ್ತು ಜಾನಪದ ಸರ್ಟಿಫಿಕೇಟ್ ಕೋರ್ಸ್‌ಗಳು ಪ್ರಾರಂಭವಾಗಿವೆ. ವಿದ್ಯಾರ್ಥಿಗಳು ಈ ಕೋರ್ಸ್‌ಗಳಲ್ಲಿ ತುಂಬಾ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.

ಪ್ರತಿ ವರ್ಷ ಜಾನಪದ ಅಭಿರುಚಿ ಶಿಬಿರ, ಜಾನಪದ

ಸಂಶೋಧನಾ ಕಮ್ಮಟ, ವಿಚಾರ ಸಂಕಿರಣಗಳನ್ನು ನಿಯತವಾಗಿ ನಡೆಸಲಾಗುತ್ತಿದೆ. ಸುಸಜ್ಜಿತವಾದ ಜಾನಪದ ಗ್ರಂಥಾಲಯ ಒಂದನ್ನು ಸ್ಥಾಪಿಸಲಾಗಿದೆ. ಮಾರ್ಚ್ ತಿಂಗಳಲ್ಲಿ ಲೋಕೋತ್ಸವ, ಅಕ್ಟೋಬರ್ ತಿಂಗಳಲ್ಲಿ ದಸರಾ ಸಮಾರಂಭ, ಜುಲೈ ತಿಂಗಳಿನಲ್ಲಿ ಗಾಳಿಪಟ ಉತ್ಸವಗಳನ್ನು ನಿಯತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಒಟ್ಟಿನಲ್ಲಿ ಜಾನಪದ ಕಲಾವಿದರ ಪಾಲಿಗೆ ಜಾನಪದ ಕಾಶಿ ಎನಿಸಿಕೊಂಡಿರುವ ಜಾನಪದ ಲೋಕವು ವಿದ್ವಾಂಸರು, ಆಸಕ್ತರು, ಸಂಶೋಧಕರ ಪಾಲಿಗೆ ಅಮೂಲ್ಯವಾದ ಆಕರ ಜಗತ್ತು. ಸಂಶೋಧಕರಿಗೆ ಸಹಸ್ರಾರು ಗ್ರಾಮೀಣ ವಸ್ತುಗಳು, ಧ್ವನಿಮುದ್ರಿಕೆಗಳು, ಉತ್ತಮ ಗ್ರಂಥ ಭಂಡಾರ, ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳು, ಗ್ರಾಮೀಣ ಪ್ರೇಕ್ಷಕರ ಸಲುವಾಗಿ ಜನಪದ ಕಲಾ ಮಹೋತ್ಸವಗಳು, ಆಸಕ್ತರಿಗೆ ಅಭಿರುಚಿ ಮೂಡಿಸುವ ಶಿಬಿರಗಳು, ಜನಪದ ಕಲೆಗಳ ತರಬೇತಿ ಶಿಬಿರಗಳು ಹೀಗೆ ಬೇಕೆನಿಸುವ ಎಲ್ಲ ಅಗತ್ಯಗಳನ್ನು ಪೂರೈಸುವ ಜಾನಪದ ಲೋಕವು ಜಗತ್ತಿನ ಅತ್ಯುತ್ತಮ ಜಾನಪದ ಕೇಂದ್ರಗಳಲ್ಲಿ ಒಂದಾಗಿದೆ. ಜಗತ್ತಿನ ಜಾನಪದ ಭೂಪಟದಲ್ಲಿ ಕರ್ನಾಟಕದ ಛಾಪನ್ನು ಮೂಡಿಸಿದ ಯಶಸ್ಸು ಶ್ರೀ ನಾಗೇಗೌಡರದು.

ಜಾನಪದ ಲೋಕದ ಉದ್ಘಾಟನೆಯೊಂದಿಗೆ, ಇದುವರೆಗೂ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ಜನಪದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ, ಗೌರವಿಸುವ, ಸನ್ಮಾನಿಸುವ ಕೆಲಸವನ್ನು ನಾಗೇಗೌಡರು ಮಾಡಿದರು. ಪ್ರತೀ ವರ್ಷ ಜಾನಪದ ಲೋಕದಲ್ಲಿ ಆಚರಿಸುವ ಲೋಕೋತ್ಸವ ಕಾರ್ಯಕ್ರಮದಲ್ಲಿ ಅತ್ಯುತ್ತಮ ಕಲಾವಿದರುಗಳನ್ನು ಆಯ್ಕೆಮಾಡಿ ಜಾನಪದ ಲೋಕ ಪ್ರಶಸ್ತಿ ನೀಡುವುದರೊಂದಿಗೆ ನೆನಪಿನ ಕಾಣಿಕೆ, ನಗದು, ಸೀರೆ, ಪಂಚೆ, ಸನ್ಮಾನ ಪತ್ರಗಳನ್ನಿತ್ತು ಗೌರವಿಸುತ್ತಾ ಬರಲಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1974), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1998), ಕನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1990), ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್ (1992), ಅಖಿಲ ಭಾರತ 64ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ (1995), ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯತ್ವ (1995), ಬೆಂಗಳೂರಿನಲ್ಲಿ ಜರುಗಿನ ದಕ್ಷಿಣ ಭಾರತ ರಾಜ್ಯಗಳ ಶಾಸಕರ ಸಮ್ಮೇಳನದಲ್ಲಿ, ಇಡೀ ದಕ್ಷಿಣ ರಾಜ್ಯಗಳಲ್ಲೇ ಅತ್ಯಂತ ಹಿರಿಯ ಶಾಸಕರೆಂದು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಎಚ್.ಡಿ. ದೇವೇಗೌಡರ ಉಪಸ್ಥಿತಿಯಲ್ಲಿ ಆಂಧ್ರಪ್ರದೇಶದ ಮುಖ್ಯ ಮಂತ್ರಿ ಶ್ರೀ ಚಂದ್ರಬಾಬು ನಾಯ್ಡು ಅವರಿಂದ ಸನ್ಮಾನ (1995), ಪ್ರೇರಣಾ ಪ್ರಶಸ್ತಿ (1999), ಎಸ್.ಡಿ. ಜಯರಾಂ ಪ್ರಶಸ್ತಿ, ಮಂಗಳೂರಿನ ಸಂದೇಶ ಕನ್ನಡ ಪ್ರಶಸ್ತಿ (2002), ಭಾರತದ ಸಾರ್ವಜನಿಕ ಸಂಪರ್ಕ ಸಂಸ್ಥೆಯ ವಿಆರ್‌ಎಸ್‌ಟಿ ಎಕ್ಸಲೆನ್ಸಿ ಪ್ರಶಸ್ತಿ (2002), ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಚುಂಚಶ್ರೀ ಪ್ರಶಸ್ತಿ (2002), ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರತಿಷ್ಠಿತ ನಾಡೋಜ ಪ್ರಶಸ್ತಿ (2002), ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ (2005) – ಇವು ಗೌಡರಿಗೆ ಸಂದ ಪ್ರಶಸ್ತಿಗಳು ಮತ್ತು ಗೌರವಗಳು.

ನಾಗೇಗೌಡರ ಆತ್ಮಕಥೆ 'ನಾಗಸಿರಿ' ಶೀರ್ಷಿಕೆಯಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿದೆ. ನಾಗೇಗೌಡರ ಬದುಕು–ಜನಪದ ಯಾತ್ರೆ, ವಿದೇಶ ಯಾತ್ರೆ–ರಾಜಕೀಯ ಯಾತ್ರೆ ಈ ನಾಲ್ಕು ಬೃಹತ್ ಸಂಪುಟಗಳು ನಾಗೇಗೌಡರು ಬಾಳಿದ ಬಗೆ, ಬಾಳಿನುದ್ದಕ್ಕೂ ತಪ್ಪದೆ ಅನುಸರಿಸಿಕೊಂಡು ಬಂದ ಶಿಸ್ತು, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಇವುಗಳನ್ನು ಸುದೀರ್ಘವಾಗಿ ಪರಿಚಯಿಸುತ್ತವೆ.

ಜಾನಪದ ರೂವಾರಿ ನಾಡೋಜ ಎಚ್.ಎಲ್. ನಾಗೇಗೌಡರು ಜಾನಪದಕ್ಕೆ ಸಂಬಂಧಿಸಿದಂತೆ ದೂರಾಲೋಚನೆಯ ಯೋಜನೆಗಳನ್ನು ಹಮ್ಮಿಕೊಂಡು ಯಶಸ್ವಿಯಾದ ಚಿರಸ್ಮರಣೀಯರು. ಅವರು ಸ್ಥಾಪಿಸಿದ 'ಜಾನಪದಲೋಕ' ಬಯಲು ವಸ್ತು ಸಂಗ್ರಹಾಲಯ ಜಾನಪದಕ್ಕೆ ದೊಡ್ಡ ಕೊಡುಗೆ. ಅವರು ಕಂಡರಿಸಿದ ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಸಂಗ್ರಹ ಸಂಪಾದನೆ ಅಧ್ಯಯನ ಸಂಶೋಧನೆ ಪ್ರಚಾರ ಪ್ರಸಾರಕ್ಕೆ ವಿಶೇಷ ಮಾದರಿ. ಸೃಜನಶೀಲ ಸಾಹಿತಿಯೂ ಆದ ಅವರ ಜಾನಪದ ಕನಸುಗಾರಿಕೆ ಅನನ್ಯವಾದದ್ದು. ಸಾಹಿತ್ಯಕವಾಗಿ ಸಾಂಸ್ಥಿಕವಾಗಿ ಸಾಂಸ್ಕೃತಿಕವಾಗಿ ಅವರ ಬದುಕು ಬರಹ ಸಾಧನೆ ಭವಿಷ್ಯದ ಪೀಳಿಗೆಗೆ ಸ್ಫೂರ್ತಿದಾಯಕ.

ಎಚ್.ಎಲ್. ನಾಗೇಗೌಡರ ಒಡನಾಡಿ ಸಾಹಿತಿ ಡಾ. ಚಕ್ಕೆರೆ ಶಿವಶಂಕರ್ ಪ್ರಸ್ತುತ ಗ್ರಂಥವನ್ನು ಬರೆದಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು,
ಬೆಂಗಳೂರು